ಕರ್ನಾಟಕ ವಿಧಾನ ಪರಿಷತ್

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :1763

2. ಸದಸ್ಯರ ಹೆಸರು : ಡಾ: ಚಂದ್ರಶೇಖರ್ ಬಿ. ಪಾಟೀಲ್ (ಪದವೀಧರರ ಕ್ಷೇತ್ರ)

3. ಉತ್ತರಿಸುವ ದಿನಾಂಕ : 19.3.2021

4. ಉತ್ತರಿಸುವವರು :ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	2010 ರಿಂದ 2021 ರವರೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್ ಇಲಾಖೆಯಲ್ಲಿ ಪತ್ರಾಂಕಿತ ಹುದ್ದೆಗಳಿಗೆ ಬಡ್ತಿ ನೀಡಲು ನಿಯಮಗಳನ್ನು ಪಾಲಿಸಿ ಇಲಾಖಾ ಮುಂಬಡ್ತಿ ಸಭೆ ನಡೆಸಲಾಗಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು).	ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹುದ್ದೆಯಿಂದ ಗ್ರೂಫ್-ಬಿ ವೃಂದದ ಸಹಾಯಕ ನಿರ್ದೇಶಕ (ಗ್ರಾಮೀಣ ಉದ್ಯೋಗ) ಹುದ್ದೆಗೆ ಹಾಗೂ ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ಹುದ್ದೆಯಿಂದ ಗ್ರೂಫ್-ಎ (ಕಿರಿಯ ಶ್ರೇಣಿ) ವೃಂದದ ಕಾರ್ಯನಿರ್ವಾಹಕ ಅಧಿಕಾರಿ/ಸಹಾಯಕ ಕಾರ್ಯದರ್ಶಿ ಹುದ್ದೆಗೆ ನಿಯಮಗಳನ್ನು ಪಾಲಿಸಿ ಮುಂಬಡ್ತಿ ನೀಡಲಾಗಿದೆ.
(ಆ)	ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 130 ಸೇವಿಡಿ 2007 ದಿ:8.10.2007ರಲ್ಲಿ ನಿಗದಿಪಡಿಸಿದ ವಿಧಾನದ ಪ್ರಕಾರ ಸಹಾಯಕ ನಿರ್ದೇಶಕರ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲಾಗಿದೆಯೇ; ಹಾಗಾದರೆ, (ಸದರಿ ದಾಖಲೆ ನೀಡುವುದು) (ಸದರಿ ಆದೇಶದ ಪ್ರಕಾರ ವೃಂದ ಮತ್ತು ನೇಮಕಾತಿಯ ಉಪಸಮಿತಿಯ ಮತ್ತು ಸಮಿತಿ ಸದಸ್ಯರ ಹೆಸರು ಹಾಗೂ ಪದನಾಮವನ್ನು ತಿಳಿಸುವುದು)	ಹೌದು ವೃಂದ ಮತ್ತು ನೇಮಕಾತಿ ನಿಯಮಗಳ ಪ್ರತಿಯನ್ನು <u>ಅನುಬಂಧ-1</u> ರಲ್ಲಿ ಲಗತ್ತಿಸಿದೆ. ವೃಂದ ಮತ್ತು ನೇಮಕಾತಿ ನಿಯಮಗಳ ಉಪಸಮಿತಿ ಮತ್ತು ಸಮಿತಿ ಸಭೆಯ ಹಾಜರಾತಿ ಪಟ್ಟಿಯನ್ನು <u>ಅನುಬಂಧ-2</u> ರಲ್ಲಿ ಲಗತ್ತಿಸಿದೆ.
(ಇ)	ಪಂಚಾಯತಿ ವಿಸ್ತರಣಾಧಿಕಾರಿ ಹುದ್ದೆಯು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹುದ್ದೆಯ	ದಿನಾಂಕ:19.3.2011 ರಂದು ನಡೆದ ವೃಂದ ಪರಿಶೀಲನಾ ಉಪ ಸಮಿತಿ ನಡವಳಿ ಹಾಗೂ

	33% ಬಡ್ತಿ ಕೋಟಾದಡಿ ವಿಲೀನವಾಗಿ, ವಿಸ್ತರಣಾಧಿಕಾರಿ ವೃಂದ ರದ್ದಾದ ಬಗ್ಗೆ ವೃಂದ ಮತ್ತು ನೇಮಕಾತಿಯ ಉಪಸಮಿತಿ ಹಾಗೂ ಸಮಿತಿಯ ಗಮನಕ್ಕೆ ಬಂದಿದೆಯೇ; (ಉಪ ಸಮಿತಿ ಮತ್ತು ಸಮಿತಿಯ ಸದಸ್ಯರು ನೀಡಿದ ಅಭಿಪ್ರಾಯ/ನಿರ್ಣಯದ ದಾಖಲೆ ನೀಡುವುದು).	ದಿನಾಂಕ:13.4.2011 ವೃಂದ ಪರಿಶೀಲನಾ ಸಮಿತಿ ನಡವಳಿಗಳಲ್ಲಿ ಪಂಚಾಯತಿ ವಿಸ್ತರಣಾಧಿಕಾರಿ ಹುದ್ದೆಯು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹುದ್ದೆಯ ಶೇ 33 ಬಡ್ತಿ ಕೋಟಾದಡಿ ವಿಲೀನವಾಗಿ, ವಿಸ್ತರಣಾಧಿಕಾರಿ ವೃಂದ ರದ್ದಾದ ಬಗೆಗಿನ ವಿವರಗಳು ಇರುವುದಿಲ್ಲ. ವೃಂದ ಪರಿಶೀಲನಾ ಉಪ ಸಮಿತಿ ನಡವಳಿಯನ್ನು ಅನುಬಂಧ-3 ರಲ್ಲಿ ಹಾಗೂ ವೃಂದ ಪರಿಶೀಲನಾ ಸಮಿತಿ ನಡವಳಿ ಪ್ರತಿಯನ್ನು ಅನುಬಂಧ-4 ರಲ್ಲಿ ಲಗತ್ತಿಸಿದೆ.
(ಈ)	ಪಿ.ಡಿ.ಓ.ಗಳ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಯನ್ನು ಪ್ರಥಮವಾಗಿ ಯಾವ ದಿನಾಂಕದಂದು ತಯಾರಿಸಿ ಬಿಡುಗಡೆ ಮಾಡಲಾಯಿತು; ಸದರಿ ಪಟ್ಟಿಯನ್ನು ತಯಾರಿಸುವ ಪೂರ್ವದಲ್ಲಿ ಎಷ್ಟು ಜನರಿಗೆ ಸಹಾಯಕ ನಿರ್ದೇಶಕರ ಹುದ್ದೆಗೆ ಮುಂಬಡ್ತಿ ನೀಡಲಾಗಿದೆ; (ಆದೇಶದ ಪ್ರತಿ ಇಲಾಖಾ ಮುಂಬಡ್ತಿ ಸಮಿತಿಯ ಟಿಪ್ಪಣಿ ನಡವಳಿ ಪ್ರತಿ ನೀಡುವುದು)	ಅಧಿಸೂಚನೆ ಸಂಖ್ಯೆ: ಗ್ರಾಅಪ 316 ಗ್ರಾಪಂಕಾ 2009, ದಿನಾಂಕ:04.3.2010 ರಲ್ಲಿ ವಿಸ್ತರಣಾಧಿಕಾರಿ ವೃಂದದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಧಿಕಾರಿಗಳನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹುದ್ದೆಯ ಮುಂಬಡ್ತಿಗೆ ನಿಗದಿಪಡಿಸಿದ ಶೇ 33% ರಷ್ಟು ಹುದ್ದೆಗಳ ಎದುರಿಗೆ ವಿಲೀನಗೊಳಿಸಲಾಗಿದೆ. ಈ ರೀತಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹುದ್ದೆಗಳ ಎದುರಿಗೆ ವಿಲೀನಗೊಂಡ ಪಂಚಾಯತ್ ವಿಸ್ತರಣಾಧಿಕಾರಿಗಳಿಗೆ ಸಂಬಂಧಿಸಿದಂತೆ ದಿನಾಂಕ:30.4.2011 ರಂದು ಜೇಷ್ಠತಾ ಪಟ್ಟಿಯನ್ನು ಹೊರಡಿಸಿದ್ದು, ಸದರಿ ಜೇಷ್ಠತಾ ಪಟ್ಟಿಯನ್ನಾಧರಿಸಿ, 2011 ರಿಂದ 2013 ರ ಅವಧಿಯಲ್ಲಿ ಸಹಾಯಕ ನಿರ್ದೇಶಕ (ಗ್ರಾಮೀಣ ಉದ್ಯೋಗ) ಹುದ್ದೆಗೆ ಮುಂಬಡ್ತಿ ನೀಡಲಾಗಿದೆ. ದಿನಾಂಕ:30.4.2011 ರ ಪೂರ್ವದಲ್ಲಿ ಸಹಾಯಕ ನಿರ್ದೇಶಕ (ಗ್ರಾ.ಉ) ಹುದ್ದೆಗೆ ಮುಂಬಡ್ತಿ ನೀಡಲಾಗಿರುವುದಿಲ್ಲ.

(ಉ)	ಸಹಾಯಕ ನಿರ್ದೇಶಕರ ಹುದ್ದೆಗೆ ಪೋಷಕರ ವೃಂದ ಯಾವುದು;	ಸಹಾಯಕ ನಿರ್ದೇಶರ (ಗ್ರಾಮೀಣ ಉದ್ಯೋಗ) ಹುದ್ದೆಗೆ ಪೋಷಕ ವೃಂದ ಪ್ರಸ್ತುತ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹುದ್ದೆಯಾಗಿರುತ್ತದೆ.
(ಊ)	ರದ್ದಾದ ವಿಸ್ತರಣಾಧಿಕಾರಿ ವೃಂದದ ಜೇಷ್ಠತಾ ಪಟ್ಟಿಯನ್ನಾಧರಿಸಿ, ಮುಂಬಡ್ತಿ ನೀಡುವ ಬಗ್ಗೆ ಸರ್ಕಾರದಲ್ಲಿ ಯಾವುದಾದರೂ ನಿಯಮಗಳಿವೆಯೇ; (ಇದ್ದಲ್ಲಿ ಪ್ರತಿ ನೀಡುವುದು).	ಅಂತಹ ಯಾವುದೇ ನಿಯಮಗಳು ಇರುವುದಿಲ್ಲ.
(ಋ)	2010 ರಿಂದ 2021ರವರಗೆ ಸಹಾಯಕ ನಿರ್ದೇಶಕರ ಹುದ್ದೆಯ ಬಡ್ತಿಗಾಗಿ ಜರುಗಿದ ಒಟ್ಟು ಇಲಾಖಾ ಮುಂಬಡ್ತಿ ಸಮಿತಿ ಸಭೆಗಳ ಸಂಖ್ಯೆ ಎಷ್ಟು? (ಸದರಿ ಸಭೆಗಳ ಟಿಪ್ಪಣಿ, ನಡವಳಿ ಪ್ರತಿ ಪರಿವೀಕ್ಷಿಸಿದ ಇಲಾಖಾ ಪರೀಕ್ಷೆ ಪ್ರಮಾಣ ಪತ್ರಗಳ ಪ್ರತಿ ನೀಡುವುದು)	ಇಲಾಖೆಯಲ್ಲಿ ಲಭ್ಯವಿರುವ ಮಾಹಿತಿಯಂತೆ ಒಟ್ಟು 10 ಇಲಾಖಾ ಮುಂಬಡ್ತಿ ಸಮಿತಿ ಸಭೆಗಳು ನಡೆದಿರುತ್ತವೆ. ಇಲಾಖಾ ಮುಂಬಡ್ತಿ ಸಮಿತಿ ಸಭೆ ನಡವಳಿಗಳನ್ನು ಅನುಬಂಧ-5 ರಲ್ಲಿ ಲಗತ್ತಿಸಿದೆ. ಅದೇ ರೀತಿ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಪರಿವೀಕ್ಷಿಸಿದ ಲಭ್ಯವಿರುವ ಇಲಾಖಾ ಪರೀಕ್ಷೆ ಪ್ರಮಾಣ ಪತ್ರಗಳನ್ನುಅನುಬಂಧ-6 ಲಗತ್ತಿಸಿದೆ. ಉಳಿದ ಅಧಿಕಾರಿಗಳ ಇಲಾಖಾ ಪರೀಕ್ಷೆ ಪ್ರಮಾಣ ಪತ್ರಗಳನ್ನು ಅವರ ಮುಂಬಡ್ತಿ ನಂತರ ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸಲಾಗಿದೆ.

ಗ್ರಾಅಪ 59 ಕೆ.ಎಸ್.ಎಸ್ 21(ಇ)

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

KA / BG - GPO/ 2515 /WPP-47/ 2009 - 2011

ಅನುಬಂಧ-1

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

ಭಾಗ - IV-A	ಬೆಂಗಳೂರು, ಸೋಮವಾರ, ಜುಲೈ ೧೧, ೨೦೧೧ (ಆಷಾಢ ೨೦, ಶಕ ವರ್ಷ ೧೯೩೩)	ನಂ. ೬೪೪

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಗ್ರಾಅಪ 17 ಪಬವ 2005, ಬೆಂಗಳೂರು, ದಿನಾಂಕ 11.7.2011

ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ ಸಂಖ್ಯೆ.14) ರ ಕಲಂ 3ರ ಉಪ ಕಲಂ (1) ಸಹವಾಚನ ಕಲಂ 8 ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸದರಿ ಅಧಿನಿಯಮದ ಕಲಂ 3ರ ಅಡಿಯ ಉಪಕಲಂ (2) ಖಂಡ (ಎ) ರಲ್ಲಿ ಅಗತ್ಯಪಡಿಸಲಾಗಿರುವಂತೆ ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಹಾಗೂ ಸ್ಥಳೀಯ ಆಡಳಿತ ಶಾಖೆ) (ವೃಂದ ಮತ್ತು ನೇಮಕಾತಿ) ನಿಯಮಗಳು, 2008ಕ್ಕೆ ತಿದ್ದುಪಡಿ ತರಲು ಈ ಕೆಳಕಂಡ ನಿಯಮಗಳ ಕರಡನ್ನು ಅಧಿಸೂಚನೆ ಸಂಖ್ಯೆ: ಗ್ರಾಅಪ 17 ಪಬವ 2005, ದಿನಾಂಕ: 6–6–2011ರ ಮೂಲಕ ಹೊರಡಿಸಿ ನಂತರ ದಿನಾಂಕ: 6–6–2011ರ ವಿಶೇಷ ಕರ್ನಾಟಕ ರಾಜ್ಯಪತ್ರದ ಭಾಗ– IV-A ರಲ್ಲಿ ಪ್ರಕಟಿಸಿ ಸದರಿ ನಿಯಮಗಳಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ಪ್ರಕಟಣೆಯ ದಿನಾಂಕದಿಂದ 15 ದಿನಗಳ ಒಳಗಾಗಿ ಸಲ್ಲಿಸಲು ಆಹ್ವಾನಿಸಲಾಗಿದ್ದರಿಂದ,

ಸದರಿ ಕರಡನ್ನು ದಿನಾಂಕ: 6–6–2011ರಂದು ಸಾರ್ವಜನಿಕರಿಗೆ ದೊರೆಯುವಂತೆ ಮಾಡಲಾಗಿದ್ದರಿಂದ.

ಮತ್ತು ಈ ಸಂಬಂಧ ಸ್ವೀಕರಿಸಲಾದ ಆಕ್ಷೇಪಣೆ ಮತ್ತು ಸಲಹೆಗಳನ್ನು ಸರ್ಕಾರವು ಪರಿಗಣಿಸಿರುವುದರಿಂದ,

ಈಗ ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ ಸಂಖ್ಯೆ.14) ರ ಕಲಂ 3ರ ಅಡಿಯ ಉಪ ಕಲಂ (1) ಸಹವಾಚನ ಕಲಂ 8 ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಏನೆಂದರೆ:–

ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ:– (1) ಈ ನಿಯಮಗಳನ್ನು ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಹಾಗೂ ಸ್ಥಳೀಯ ಆಡಳಿತ ಶಾಖೆ) (ವೃಂದ ಮತ್ತು ನೇಮಕಾತಿ) (ಮೊದಲನೇ ತಿದ್ದುಪಡಿ) ನಿಯಮಗಳು, 2011 ಎಂದು ಕರೆಯುವುದು.

(2) ಈ ನಿಯಮಗಳು ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಅನುಸೂಚಿಯ ತಿದ್ದುಪಡಿ:-** ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಹಾಗೂ ಸ್ಥಳೀಯ ಆಡಳಿತ ಶಾಖೆ) (ವೃಂದ ಮತ್ತು ನೇಮಕಾತಿ) ನಿಯಮಗಳು, 2008ರ ಅನುಸೂಚಿಯಲ್ಲಿ:-

(1) ಕ್ರಸಂ. 5ರಲ್ಲಿನ ಕಾರ್ಯನಿರ್ವಾಹಕ ಅಧಿಕಾರಿ, ಪಂಚಾಯತ್ ರಾಜ್/ಸಹಾಯಕ ಕಾರ್ಯದರ್ಶಿ, ಪಂಚಾಯತ್ ರಾಜ್ ವರ್ಗದ ಹುದ್ದೆಗಳಿಗೆ ಸಂಬಂಧಿಸಿದ ನಮೂದುಗಳಲ್ಲಿ -

(ಅ) ಅಂಕಣ (4) ರಲ್ಲಿ ಹಾಲಿ ಇರುವ ನಮೂದುಗಳಿಗೆ ಬದಲಾಗಿ ಈ ಕೆಳಕಂಡ ನಮೂದುಗಳನ್ನು ಅಳವಡಿಸಲಾಗಿದೆ, ಅದೇನೆಂದರೆ,

"ಶೇ. 40 ರಷ್ಟು ಹುದ್ದೆಗಳನ್ನು ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) ನಿಯಮಗಳು, 1997 ರ ಪ್ರಕಾರ ನೇರ ನೇಮಕಾತಿ ಮೂಲಕ ; ಮತ್ತು

ಶೇ. 60 ರಷ್ಟು ಹುದ್ದೆಗಳನ್ನು ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ವೃಂದದಿಂದ ಮುಂಬಡ್ತಿ ಮೂಲಕ"

(ಆ) ಅಂಕಣ (5) ರಲ್ಲಿ ಈ ಕೆಳಕಂಡ ನಮೂದುಗಳನ್ನು ಅಳವಡಿಸಲಾಗಿದೆ, ಅದೇನೆಂದರೆ:-

"**ಬಡ್ತಿಗಾಗಿ :**

ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ವೃಂದದಲ್ಲಿ 5 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರತಕ್ಕದ್ದು.

ಪರಂತು, 5 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರುವ ಅರ್ಹ ವ್ಯಕ್ತಿಗಳು ಲಭ್ಯವಿಲ್ಲದಿದ್ದ ಪಕ್ಷದಲ್ಲಿ 3 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರುವ ವ್ಯಕ್ತಿಗಳನ್ನು ಪರಿಗಣಿಸಬಹುದು.

ಪರಂತು, ಮೇಲಿನ ಸೇವಾ ಅಗತ್ಯತೆಯನ್ನು ಹೊಂದಿರುವ ವ್ಯಕ್ತಿಗಳು ಲಭ್ಯವಿಲ್ಲದಿದ್ದಲ್ಲಿ ಅಷ್ಟರ ಮಟ್ಟಿನ ಹುದ್ದೆಗಳನ್ನು ಸಂದರ್ಭಾನುಸಾರ ನೇರ ನೇಮಕಾತಿಯಿಂದಾಗಲೀ ಮತ್ತು / ಅಥವಾ ಬಡ್ತಿ ಮೂಲಕದಿಂದಾಗಲೀ ತುಂಬುವವರೆಗೆ ಕರ್ನಾಟಕ ಆಡಳಿತ ಸೇವೆ (ಕಿರಿಯ ಶ್ರೇಣಿ) ವೃಂದದ ಅಧಿಕಾರಿಗಳಿಂದ ಮತ್ತು ಅದೇ ದರ್ಜೆಯ ಹುದ್ದೆಗಳನ್ನು ಹೊಂದಿರುವ ಅಭಿವೃದ್ಧಿ ಇಲಾಖೆಗಳ ಅಧಿಕಾರಿಗಳ ನಿಯೋಜನೆಯಿಂದ ತುಂಬಬಹುದು."

(2) ಕ್ರಮಸಂಖ್ಯೆ 6 ರ ನಂತರ ಈ ಕೆಳಕಂಡ ನಮೂದುಗಳನ್ನು ಅಳವಡಿಸಲಾಗಿದೆ, ಅದೇನೆಂದರೆ:-

6ಎ	ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) (ರೂ. 11400-21600)	-	176	ಪಂಚಾಯತ್ ಅಭಿವೃದ್ಧಿ ಅಧಿಕಾರಿ ವೃಂದದಿಂದ ಮುಂಬಡ್ತಿ ಮೂಲಕ	ಸಂದರ್ಭಾನುಸಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿ ವೃಂದದಲ್ಲಿ ಅಥವಾ ಪಂಚಾಯತ್ ವಿಸ್ತರಣಾಧಿಕಾರಿ ವೃಂದದಲ್ಲಿ ಅಥವಾ ಈ ಎರಡೂ ವೃಂದಗಳು ಸೇರಿದಂತೆ ಒಟ್ಟಾರೆ 5 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರಬೇಕು. ಪರಂತು, ಪಂಚಾಯತ್ ಅಭಿವೃದ್ಧಿ ಅಧಿಕಾರಿ ವೃಂದದಲ್ಲಿ ಅಥವಾ ಪಂಚಾಯತ್ ವಿಸ್ತರಣಾಧಿಕಾರಿ ವೃಂದದಲ್ಲಿ ಅಥವಾ ಈ ಎರಡೂ ವೃಂದಗಳು ಸೇರಿದಂತೆ ಒಟ್ಟಾರೆ 5 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರುವ ಅರ್ಹ ವ್ಯಕ್ತಿಗಳು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ಈ ಯಾವುದೇ ವೃಂದದಲ್ಲಿ ಅಥವಾ ಎರಡೂ ವೃಂದಗಳಲ್ಲಿ ಒಟ್ಟಾರೆ 3 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರುವ ವ್ಯಕ್ತಿಗಳನ್ನು ಪರಿಗಣಿಸಬಹುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಯು.ಶಿವಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಅನುಬಂಧ - 2

ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಆಡಳಿತ ಶಾಖೆ) (ವೃಂದ ಮತ್ತು ನೇಮಕಾತಿ ನಿಯಮಗಳು) 2008ಕ್ಕೆ ಮೊದಲನೇ ತಿದ್ದುಪಡಿ ತರುವ ಸಂಬಂಧ ವೃಂದ ಪರಿಶೀಲನಾ ಉಪ ಸಮಿತಿಯ ದಿನಾಂಕ: 19-3-2011ರ ಸಭೆ

ಹಾಜರಿದ್ದ ಅಧಿಕಾರಿಗಳು	ಸಹಿ
1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ	[signature]
2. ಸರ್ಕಾರದ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ	[signature] 19/3
3. ಸರ್ಕಾರದ ಅಪರ (ಪ್ರಭಾರ) ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಸೇವಾ ನಿಯಮಗಳು)	[signature] 19/3
4. ಸರ್ಕಾರದ ಜಂಟಿ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನಾ ಇಲಾಖೆ	—
5. ಸರ್ಕಾರದ ಉಪ ಕಾರ್ಯದರ್ಶಿ(ಸೇವೆಗಳು), ಆರ್ಥಿಕ ಇಲಾಖೆ	[signature]
6. ಸರ್ಕಾರದ ಉಪ ಕಾರ್ಯದರ್ಶಿ(ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ	[signature]

ಅನುಬಂಧ -೨

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ ಕುರಿತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 13.04.2011ರ ವೃಂದ ಪರಿಶೀಲನಾ ಸಮಿತಿ ಸಭೆಗೆ ಹಾಜರಾದ ಅಧಿಕಾರಿಗಳ ಪಟ್ಟಿ

Sl No	Name & Designation		Signature
01	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು		
02	ಪ್ರಧಾನ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ [illegible]	ಉಪ (ಸೇವೆ 1)	[illegible]
03	ಕಾರ್ಯದರ್ಶಿಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ	—	—
04	ಕಾರ್ಯದರ್ಶಿಗಳು, ಸಿಆಸುಇ ಇಲಾಖೆ	[illegible]	[illegible]
05	ಪ್ರಧಾನ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ	[illegible]	[illegible]
06	ಅಪರ ಕಾರ್ಯದರ್ಶಿ, ಸಿಆಸುಇ (ಸೇವಾ ನಿಯಮಗಳು)	[illegible]	
07	ಪ್ರಧಾನ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	—	—

ಅನುಬಂಧ-3

ದಿನಾಂಕ 19/03/2011 ರಂದು ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಜರುಗಿದ ವೃಂದ ಪರಿಶೀಲನಾ ಉಪ ಸಮಿತಿಯ ಸಭೆಯ ನಡವಳಿ.

ಸಭೆಗೆ ಹಾಜರಾಗಿದ್ದ ಅಧಿಕಾರಿಗಳ ಪಟ್ಟಿ.

1) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
2) ಸರ್ಕಾರದ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
3) ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ(ಸೇ-1)
4) ಸರ್ಕಾರದ ಉಪ ಕಾರ್ಯದರ್ಶಿ, ಗ್ರಾ.ಅ.ಪಂ.ರಾಜ್ ಇಲಾಖೆ (ಆಡಳಿತ)
5) ಸರ್ಕಾರದ ಅಧೀನ ಕಾರ್ಯದರ್ಶಿ, ಸಿ.ಆ.ಸು.ಇಲಾಖೆ (ಸೇವಾ ನಿಯಮಗಳು-3).

....

ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಹಾಗೂ ಸ್ಥಳೀಯ ಆಡಳಿತ ಶಾಖೆ)ಯ
ವೃಂದ ವಿನ್ಯಾಸದಲ್ಲಿ ಗ್ರೂಪ್-ಎ ವೃಂದಗಳ ನಂತರ ಗ್ರೂಪ್-ಸಿ ವೃಂದಗಳು ಬಿಂಬಗೊಂಡಿದ್ದು ಈ
ಹಿಂದೆ 1999ರಲ್ಲಿ ಗ್ರೂಪ್-ಬಿ ವೃಂದದ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಹುದ್ದೆಗಳನ್ನು
ರದ್ದುಪಡಿಸಿದ್ದರಿಂದ ಒಂದು ಶೂನ್ಯ ಪರಿಸ್ಥಿತಿ ಉದ್ಭವಿಸಿದ್ದು ಅದೇ ಪರಿಸ್ಥಿತಿ ಈಗಲೂ ಕೂಡ
ಮುಂದುವರೆದಿರುವುದನ್ನು ಉಪ ಸಮಿತಿಯ ಗಮನಕ್ಕೆ ತರಲಾಯಿತು. ಜೊತೆಗೆ 2000ನೇ
ಸಾಲಿನಿಂದ ಈಚೆಗೆ ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದಂತೆ ವಿವಿಧ ಅಭಿವೃದ್ಧಿ ಯೋಜನೆಗಳನ್ನು
ಕೇಂದ್ರ ಸರ್ಕಾರವು ಘೋಷಿಸಿ ರಾಜ್ಯ ಸರ್ಕಾರದ ಮೂಲಕ ಅನುಷ್ಠಾನಗೊಳಿಸಲು ನಿರ್ದೇಶನ
ಹಾಗೂ ಮಾರ್ಗಸೂಚಿಗಳನ್ನು ನೀಡಿದ ಪರಿಣಾಮ ತಾಲ್ಲೂಕು ಪಂಚಾಯತಿಗಳ ಮಟ್ಟದಲ್ಲಿ
ಕಾರ್ಯನಿರ್ವಹಣಾಧಿಕಾರಿಗಳ ಕರ್ತವ್ಯ ಮತ್ತು ಜವಾಬ್ದಾರಿಗಳು ತೀವ್ರತರವಾಗಿ ಏರಿಕೆಯಾಗುವುದರ
ಜೊತೆಗೆ ಹೆಚ್ಚು ಸಂಕೀರ್ಣವೂ ಆಗಿರುವ ಹಿನ್ನೆಲೆಯಲ್ಲಿ ಸದರಿ ಅಧಿಕಾರಿಗಳಿಗೆ ದಿನ ನಿತ್ಯದ ಕೆಲಸ
ಕಾರ್ಯಗಳನ್ನು ನಿರ್ವಹಿಸಲು ಒಬ್ಬ ಸಹಾಯಕ ಅಧಿಕಾರಿಯ ಅವಶ್ಯಕತೆ ಇರುವ ಅಂಶವನ್ನೂ ಸಹ
ಉಪ ಸಮಿತಿಯ ಗಮನಕ್ಕೆ ತರಲಾಯಿತು. ಈ ರೀತಿ ಪ್ರತಿಯೊಂದು ತಾಲ್ಲೂಕಿಗೆ ಒಂದರಂತೆ
176 ಗ್ರೂಪ್-ಬಿ ವೃಂದದ ಹುದ್ದೆಗಳನ್ನು ತಾಲ್ಲೂಕು ಪಂಚಾಯತಿ ಹಂತದಲ್ಲಿ ಸೃಜಿಸಿ ಕರ್ತವ್ಯ
ಹಾಗೂ ಜವಾಬ್ದಾರಿಗಳನ್ನು ಇಬ್ಬರು ಅಧಿಕಾರಿಗಳ ನಡುವೆ ಸೂಕ್ತ ರೀತಿಯಲ್ಲಿ ಹಂಚಿಕೆ ಮಾಡಿ
ವ್ಯವಸ್ಥಿತ ಹಾಗೂ ಪರಿಣಾಮಕಾರಿಯಾದ ಕಾರ್ಯನಿರ್ವಹಣೆಯನ್ನು ಜರುಗಿಸುವ ಉದ್ದೇಶದಿಂದ,
ಇತ್ತೀಚೆಗೆ ಅಂದರೆ 01/04/2008 ರಿಂದ ಜಾರಿಗೆ ಬರುವಂತೆ ಮಹಾತ್ಮಾಗಾಂಧಿ ರಾಷ್ಟ್ರೀಯ
ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ತಾಲ್ಲೂಕು ಮಟ್ಟದಲ್ಲಿ ಸೃಜಿಸಲಾಗಿರುವ ಗ್ರೂಪ್-ಬಿ
ವೃಂದದ 176 ಹೆಚ್ಚುವರಿ ಕಾರ್ಯಕ್ರಮ ಅಧಿಕಾರಿಗಳ (Additional Programme Officers)
ಹುದ್ದೆಗಳನ್ನು ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಹಾಗೂ ಸ್ಥಳೀಯ ಆಡಳಿತ
ಶಾಖೆ)ಯ ವ್ಯಾಪ್ತಿಗೆ ತಂದು ಮುಖ್ಯ ವಾಹಿನಿಯಲ್ಲಿ ಅಳವಡಿಸುವ ಬಗೆಗಿನ ಪ್ರಸ್ತಾವವನ್ನು ಆರ್ಥಿಕ
ಇಲಾಖೆಯ ಮುಂದಿಟ್ಟ ಮೇರೆಗೆ ಸದರಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ
ದಿನಾಂಕ 9/3/2009 ರಂದು ಜರುಗಿದ ಸಭೆಯಲ್ಲಿ ಈ ಬಗ್ಗೆ ನಿರ್ಣಯ ಕೈಗೊಂಡು
ರೂ.11400-21600 ವೇತನ ಶ್ರೇಣಿಯ 176 ಹೆಚ್ಚುವರಿ ಕಾರ್ಯಕ್ರಮ ಅಧಿಕಾರಿ ಹುದ್ದೆಗಳನ್ನು

ಸಹಾಯಕ ನಿರ್ದೇಶಕರು(ಗ್ರಾಮೀಣ ಉದ್ಯೋಗ) ಎಂದು ಪುನರ್ ನಾಮಕರಣ ಮಾಡಿ ಸದರಿ ಹುದ್ದೆಗಳನ್ನು ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಹಾಗೂ ಸ್ಥಳೀಯ ಆಡಳಿತ ಶಾಖೆ)ಯಲ್ಲಿ ವೃಂದೀಕರಿಸಲು ಆಡಳಿತಾತ್ಮಕ ನಿರ್ಣಯ ಕೈಗೊಂಡು ಅದಕ್ಕೆ ಸಚಿವ ಸಂಪುಟದ ಅನುಮೋದನೆ ಪಡೆಯುವಂತೆ ಹಾಗೂ ಸದರಿ ಹುದ್ದೆಗಳ ವೇತನ ಇತ್ಯಾದಿಗಳ ಆಡಳಿತಾತ್ಮಕ ವೆಚ್ಚವನ್ನು ಯಥಾವತ್ತಾಗಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಭರಿಸಬಹುದೆಂದು ತೀರ್ಮಾನಿದ ಅಂಶವನ್ನು ವೃಂದ ಪರಿಶೀಲನಾ ಉಪ ಸಮಿತಿಯ ಗಮನಕ್ಕೆ ತರಲಾಯಿತು. ಅದನ್ನನುಸರಿಸಿ ಆರ್ಥಿಕ ಇಲಾಖೆಯು ದಿನಾಂಕ 11/05/2009ರ ಹಿಂಬರಹದ ಮೂಲಕ ಗ್ರಾ.ಅ.ಪಂ.ರಾಜ್ ಇಲಾಖೆಯ ಕಡತ ಸಂಖ್ಯೆ: ಗ್ರಾಅಪ 17 ಪಬವ 2005ರಲ್ಲಿ ಸಹಮತಿ ನೀಡಿದ್ದು ಈ ರೀತಿ ತಾಲ್ಲೂಕು ಪಂಚಾಯತಿ ಹಂತದಲ್ಲಿ ಸೃಜಿಸಲಾಗುವ ಗ್ರೂಪ್-ಬಿ ಹುದ್ದೆಗಳನ್ನು ತುಂಬುವ ಸಂಬಂಧ ಗ್ರಾಮ ಪಂಚಾಯತಿಗಳ ಹಂತದ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೃಂದದೊಂದಿಗೆ ಪಂಕ್ತೀಕರಣಗೊಳಿಸಲೂ ಕೂಡ ತಿಳಿಸಿದ್ದ ಅಂಶವನ್ನು ಸಭೆಯ ಗಮನಕ್ಕೆ ತರಲಾಯಿಸು. ಆ ಸಂದರ್ಭದಲ್ಲಿ ಆರ್ಥಿಕ ಇಲಾಖೆಯ ಪ್ರತಿನಿಧಿಯಾದ ಉಪ ಕಾರ್ಯದರ್ಶಿ (ಸೇವೆಗಳು) ಮಾತನಾಡುತ್ತಾ ಹೆಚ್ಚುವರಿ ಕಾರ್ಯಕ್ರಮ ಅಧಿಕಾರಿ ಹುದ್ದೆಗಳನ್ನು ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ಎಂದು ಪುನರ್ ಪದನಾಮಕರಣ ಗೊಳಿಸುವ ನಿಟ್ಟಿನಲ್ಲಿ ಸೂಕ್ತ ಆದೇಶ ಹೊರಡಿಸಲು ಸಹ ಸಲಹೆ ಮಾಡಿದರು. ಅದರಂತೆ ಕ್ರಮ ವಹಿಸಲು ಸಮಿತಿಯು ಸೂಚಿಸಿತು.

ಈ ಪ್ರಕಾರವಾಗಿ ಈಗಾಗಲೇ ದಿನಾಂಕ 20/1/2011 ರಿಂದ ಜಾರಿಗೆ ಬಂದಿರುವ ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಹಾಗೂ ಸ್ಥಳೀಯ ಆಡಳಿತ ಶಾಖೆ) (ವೃಂದ ಮತ್ತು ನೇಮಕಾತಿ) ನಿಯಮಗಳು 2008ಕ್ಕೆ ಸೂಕ್ತ ತಿದ್ದುಪಡಿ ತರುವ ನಿಟ್ಟಿನಲ್ಲಿ ಮಂಡಿಸಿದ ಕರಡು ತಿದ್ದುಪಡಿ ನಿಯಮಗಳನ್ನುಉಪ ಸಮಿತಿಯು ಪರಿಶೀಲನೆಗೆ ಕೈಗೆತ್ತಿಕೊಂಡಿತು.

ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ವೃಂದದ ಹುದ್ದೆಗಳನ್ನು ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಹಾಗೂ ಸ್ಥಳೀಯ ಆಡಳಿತ ಶಾಖೆ)ಯ ವ್ಯಾಪ್ತಿಗೆ ತಂದು ಮುಖ್ಯ ವಾಹಿನಿಯಲ್ಲಿ ಅಳವಡಿಸುವ ಜೊತೆಗೆ ಸದರಿ ಹುದ್ದೆಗಳನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿ ವೃಂದದಿಂದ ಮುಂಬಡ್ತಿ ಮೂಲಕ ತುಂಬಲು ಅನುವಾಗುವಂತೆ ಸದರಿ ವೃಂದವನ್ನು ಪಂಕ್ತಿಕರಣಗೊಳಿಸುವ ಜೊತೆಗೆ ಸದರಿ ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ವೃಂದವನ್ನು ಪೋಷಕ ವೃಂದವನ್ನಾಗಿ ಪರಿಗಣಿಸಿ ಶೇಕಡಾ 50ರಷ್ಟು ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ / ಜಿಲ್ಲಾ ಪಂಚಾಯತಿಯ ಸಹಾಯಕ ಕಾರ್ಯದರ್ಶಿ ವೃಂದಕ್ಕೆ ಮುಂಬಡ್ತಿ ನೀಡಲು ಹಾಗೂ ಉಳಿದ ಶೇಕಡಾ 50ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬುವ ನಿಟ್ಟಿನಲ್ಲಿ ಅವಕಾಶ ಕಲ್ಪಿಸುವುದನ್ನು ಉಪ ಸಮಿತಿಯು ಗಮನಿಸಿತು.

ಈ ರೀತಿ ತಯಾರಿಸಿರುವ ಕರಡು ತಿದ್ದುಪಡಿ ನಿಯಮಗಳನ್ನು ವೃಂದ ಪರಿಶೀಲನಾ ಉಪ ಸಮಿತಿಯು ಅನುಮೋದಿಸಿ ಸದರಿ ಕರಡು ತಿದ್ದುಪಡಿ ನಿಯಮಗಳನ್ನು ಪರಿಶೋಧಿಸಲು ಜರೂರಾಗಿ ಶಾಸನ ರಚನೆ ಹಾಗೂ ಸಂಸದೀಯ ವ್ಯವಹಾರ ಇಲಾಖೆಗೆ ಕಳುಹಿಸಲು ಸೂಚಿಸಿತು. ಜೊತೆಯಲ್ಲಿಯೇ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯ ವೃಂದ ಪರಿಶೀಲನಾ ಸಮಿತಿಯು ಮುಂದೆ ಪ್ರಸ್ತಾವಿತ ತಿದ್ದುಪಡಿಯನ್ನು ಪರಿಶೀಲನೆಗಾಗಿ ಮಂಡಿಸುವ ಸಂಬಂಧ ಸಮಿತಿಯ ಸಭೆಗೆ ದಿನಾಂಕ ಹಾಗೂ ಸಮಯವನ್ನು ನಿಗದಿಪಡಿಸುವ ಕುರಿತಂತೆ ಆದೇಶ ಕೋರಿ ಕಡತವನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರಿಗೆ ಸಲ್ಲಿಸಲೂ ಸಹ ಉಪ ಸಮಿತಿಯು ಸೂಚನೆ ನೀಡಿತು.

ಉಳಿದಂತೆ ಹೋಬಳಿ ಮಟ್ಟದಲ್ಲಿ ಪ್ರತಿ ಹೋಬಳಿಗೆ ಒಂದರಂತೆ ಗ್ರೂಪ್-ಬಿ ವೃಂದದ ಹುದ್ದೆಗಳನ್ನು ಸೃಜಿಸುವ ಕುರಿತಾದ ವಿಷಯವು ಸಧ್ಯಕ್ಕೆ ವೃಂದ ಪರಿಶೀಲನಾ ಉಪ ಸಮಿತಿಯ ವ್ಯಾಪ್ತಿಗೆ ಬರುವುದಿಲ್ಲವಾದ್ದರಿಂದ ಆಡಳಿತ ಇಲಾಖೆಯು ಈ ವಿಷಯವನ್ನು ಪ್ರತ್ಯೇಕವಾಗಿ ಪರಿಶೀಲಿಸಿ ಸೂಕ್ತ ಸಮರ್ಥನೆಯೊಂದಿಗೆ ಆರ್ಥಿಕ ಇಲಾಖೆಯನ್ನು ಸಂಪರ್ಕಿಸಬಹುದೆಂದು ಉಪ ಸಮಿತಿಯು ಅಭಿಪ್ರಾಯಪಟ್ಟಿತು.

ಅಧ್ಯಕ್ಷರಿಗೆ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

(ಪಿ. ರವಿಕುಮಾರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಅನುಬಂಧ-4

ಕರ್ನಾಟಕ ಸಾಮಾನ್ಯ ಸೇವೆ(ಅಭಿವೃದ್ಧಿ ಶಾಖೆ ಹಾಗೂ ಸ್ಥಳೀಯ ಆಡಳಿತ ಶಾಖೆ)ಯ ವ್ಯಾಪ್ತಿಯಲ್ಲಿ ಗ್ರೂಪ್-ಬಿ ವೃಂದದ ಹುದ್ದೆಗಳನ್ನು ಸೃಜಿಸಿ ನೇಮಕಾತಿ ಕಾರ್ಯವಿಧಾನವನ್ನು ನಿಗದಿಪಡಿಸುವ ಸಂಬಂಧ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 13-4-2011ರ ಅಪರಾಹ್ನ 12.00 ಗಂಟೆಗೆ ಜರುಗಿದ ಸಭೆಯ ನಡವಳಿ

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಪಟ್ಟಿ:

1) ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
2) ಸರ್ಕಾರದ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
3) ಸರ್ಕಾರದ ಅಪರ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಸೇವಾ ನಿಯಮಗಳು)
4) ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ(ಸೇವೆ-1)
5) ಸರ್ಕಾರದ ಉಪ ಕಾರ್ಯದರ್ಶಿ(ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
6) ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಬಿ ಮತ್ತು ಸಿ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

– – –

ಮೊದಲಿಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ವ್ಯಾಪ್ತಿಯ ಕರ್ನಾಟಕ ಸಾಮಾನ್ಯ ಸೇವೆ(ಅಭಿವೃದ್ಧಿ ಶಾಖೆ ಹಾಗೂ ಸ್ಥಳೀಯ ಆಡಳಿತ ಶಾಖೆ)ಗೆ ಸಂಬಂಧಿಸಿದ ನೂತನ ವೃಂದ ಮತ್ತು ನೇಮಕಾತಿ ನಿಯಮಗಳನ್ನು ದಿನಾಂಕ: 20-1-2011 ರಿಂದ ಜಾರಿಗೆ ಬರುವಂತೆ ಪ್ರಕಟಿಸಲಾಗಿರುವ ಅಂಶವನ್ನು ಸಭೆಯ ಗಮನಕ್ಕೆ ತರಲಾಯಿತು. ಈ ನಿಯಮಗಳಲ್ಲಿ ಸಮೂದಿಸಿರುವಂತೆ ಅಭಿವೃದ್ಧಿ ಶಾಖೆಯ ಗ್ರೂಪ್-ಎ ಹಾಗೂ ಗ್ರೂಪ್-ಸಿ ವೃಂದಗಳ ನಡುವೆ – ಈ ಹಿಂದೆ ಅಸ್ತಿತ್ವದಲ್ಲಿದ್ದ ಕ್ಷೇತ್ರಾಭಿವೃದ್ಧಿ ಅಧಿಕಾರಿ ವೃಂದವನ್ನು 1999ರಲ್ಲಿ ರದ್ದುಪಡಿಸಿದ ಪರಿಣಾಮ – ಶೂನ್ಯ ಪರಿಸ್ಥಿತಿ ಉಂಟಾಗಿದ್ದು, ಈ ಪರಿಸ್ಥಿತಿಯನ್ನು ಹೋಗಲಾಡಿಸುವ ಉದ್ದೇಶದಿಂದ; ಸಮತಲ ಹಾಗೂ ಲಂಬ ಸಾಪೇಕ್ಷತೆಯನ್ನು ಕಾಪಾಡಲು ; ಮತ್ತು ಕಳೆದ ದಶಕದಿಂದ ಗಣನೀಯ ಪ್ರಮಾಣದಲ್ಲಿ ತಾಲ್ಲೂಕು ಪಂಚಾಯತಿಗಳ ಕರ್ತವ್ಯ ಹಾಗೂ ಜವಾಬ್ದಾರಿಗಳು ಏರಿಕೆಯಾಗಿ ಸಂಕೀರ್ಣಗೊಂಡಿರುವ ಅಂಶವನ್ನೂ ಸಹ ಸಭೆಯ ಗಮನಕ್ಕೆ ತರಲಾಯಿತು. ಈ ಕಾರಣಗಳ ನೆಲೆಯಲ್ಲಿ ಪ್ರತಿ ತಾಲ್ಲೂಕಿಗೆ ಒಂದರಂತೆ ಒಟ್ಟು 176 ಗ್ರೂಪ್-ಬಿ ವೃಂದದ ಹುದ್ದೆಗಳನ್ನು ಅಭಿವೃದ್ಧಿ ಶಾಖೆಯ ಅಡಿಯಲ್ಲಿ ಸೃಜಿಸುವ ಅಗತ್ಯತೆಯನ್ನು ಸಭೆಗೆ ವಿಷದಪಡಿಸಲಾಯಿತು. ಈಗಾಗಲೇ ಅಧಿಕ ಕಾರ್ಯಬಾಹುಳ್ಯದಿಂದ ತ:ಪ್ತರಾಗಿರುವ ಗ್ರೂಪ್- 'ಎ' ಕಿರಿಯ ಶ್ರೇಣಿ ವೃಂದದ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಒಬ್ಬ ಗ್ರೂಪ್-ಬಿ ವೃಂದದ ಅಧಿಕಾರಿಯ ಸಹಾಯವನ್ನು ಒದಗಿಸಿ, ಅವರ ಜವಾಬ್ದಾರಿಗಳ ಪೈಕಿ (ಸಭಾ ಟಿಪ್ಪಣಿಯ ಅನುಬಂಧ-IVರಲ್ಲಿ ಪಟ್ಟಿ ಮಾಡಿರುವಂತೆ) ಕೆಲವು ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ವಹಿಸಬಹುದೆಂಬ ಅಂಶವನ್ನು ಸಭೆಯ ಗಮನಕ್ಕೆ ತರಲಾಯಿತು.

ಕೇಂದ್ರ ಸರ್ಕಾರದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ದಿನಾಂಕ: 1-4-2008 ರಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಅನುಷ್ಠಾನಗೊಳಿಸಲಾಗುತ್ತಿದ್ದು ಇದಕ್ಕಾಗಿ ರಾಜ್ಯ, ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಮಟ್ಟಗಳಲ್ಲಿ ವಿವಿಧ ಹುದ್ದೆಗಳನ್ನು ಸೃಜಿಸಲಾಗಿರುವ ಬಗ್ಗೆ ಮತ್ತು ಈ ಯೋಜನೆಯನ್ನು ಸಂಸತ್ತು ಅನುಮೋದಿಸಿರುವ ಕಾಯ್ದೆಯಡಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವುದರಿಂದ, ಸದರಿ ಯೋಜನೆಯು ಒಂದು ಶಾಶ್ವತತೆಯ ರೂಪವನ್ನು ಪಡೆದಿರುವುದರಿಂದ, ಈ ಯೋಜನೆಯ

ಅಡಿಯಲ್ಲಿ ಸೃಜಿಸಲಾಗಿರುವ ವಿವಿಧ ವೃಂದಗಳ ಪೈಕಿ ಪ್ರತಿ ತಾಲ್ಲೂಕಿಗೆ ಒಂದರಂತೆ ಸೃಜನೆಯಾಗಿರುವ ಒಟ್ಟು 176 ಹೆಚ್ಚುವರಿ ಕಾರ್ಯಕ್ರಮಾಧಿಕಾರಿ(Additional Programme Officer) ಹುದ್ದೆಗಳನ್ನು ಮೇಲಿನ ಉದ್ದೇಶವನ್ನು ಕಾರ್ಯರೂಪಕ್ಕೆ ತರಲು ಮುಖ್ಯ ವಾಹಿನಿಗೆ ತಂದು ಸಹಾಯಕ ನಿರ್ದೇಶಕ(ಗ್ರಾಮೀಣ ಉದ್ಯೋಗ) ಎಂದು ಪುನರ್ ಪದನಾಮೀಕರಿಸಿ ಸದರಿ ಹುದ್ದೆಗಳ ವೇತನ ಇತ್ಯಾದಿಗಳನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಭರಿಸಬಹುದೆಂಬ ಷರತ್ತಿಗೆ ಒಳಪಟ್ಟು ಆರ್ಥಿಕ ಇಲಾಖೆಯು ಸಹಮತಿ ನೀಡಿರುವ ಅಂಶವನ್ನೂ ಸಹ ಸಭೆಯ ಗಮನಕ್ಕೆ ತರಲಾಯಿತು. ಈ ಪ್ರಕಾರವಾಗಿ ಕರಡು ತಿದ್ದುಪಡಿ ನಿಯಮಗಳನ್ನು ತಯಾರಿಸಿ ವೃಂದ ಪರಿಶೀಲನಾ ಉಪ ಸಮಿತಿಯ ಸಭೆಯಲ್ಲಿ ಹಾಗೂ ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನಾ ಇಲಾಖೆಯ ಅನುಮೋದನೆಯನ್ನು ಪಡೆದಿರುವ ಅಂಶವನ್ನು ಸಭೆಯು ಗಮನಿಸಿತು.

ಸಾಂದರ್ಭಿಕವಾಗಿ, ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಕಾರ್ಯದರ್ಶಿಯು, ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ವೃಂದಕ್ಕೆ ಸಂಬಂಧಿಸಿದಂತೆ ನೇರ ನೇಮಕಾತಿ ಖೋಟಾವನ್ನು ಹಾಲಿ ಅಸ್ತಿತ್ವದಲ್ಲಿರುವ ಶೇಕಡ 60ರ ಬದಲು ಶೇಕಡ 50ಕ್ಕೆ ಇಳಿಸಲು ಪ್ರಸ್ತಾವಿತ ಕರಡು ತಿದ್ದುಪಡಿ ನಿಯಮಗಳಲ್ಲಿ ನಮೂದಿಸಿರುವುದರ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುತ್ತಾ, ನೇರ ನೇಮಕಾತಿ ಮೂಲಕ ಆಯ್ಕೆಯಾಗಿರುವ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಮುಂಬಡ್ತಿಗೆ ಹೆಚ್ಚಿನ ಅವಕಾಶ ಇಲ್ಲದಿರುವುದರಿಂದ ಮತ್ತು ನೇರ ನೇಮಕಾತಿಯ ಹುದ್ದೆಗಳ ಸಂಖ್ಯೆಯು ಹೆಚ್ಚಳವಾದಲ್ಲಿ, ಆ ರೀತಿ ನೇಮಕಗೊಳ್ಳುವವರು ವೃತ್ತಿ ಜೀವನದಲ್ಲಿ ಹೆಚ್ಚಿನ ಬಡ್ತಿಯ ಅವಕಾಶದಿಂದ ವಂಚಿತರಾಗಿ ನಿರುತ್ಸಾಹಗೊಳ್ಳುವ ಸಾಧ್ಯತೆಯು ಇರುವುದರಿಂದ,. ನೇರ ನೇಮಕಾತಿ ಖೋಟಾವನ್ನು ಶೇಕಡ 40ಕ್ಕೆ ಇಳಿಸುವುದು ಸೂಕ್ತವೆಂದು ತಿಳಿಸಿದರು. ಸಭೆಯು ಈ ಸಲಹೆಯನ್ನು ಅನುಮೋದಿಸಿತು.

ಮೇಲಿನ ಎಲ್ಲಾ ವಿವರಗಳನ್ನು ಗಣನೆಗೆ ತೆಗೆದುಕೊಂಡು, ಪ್ರಸ್ತಾವಿತ ಗ್ರೂಪ್-ಬಿ ವೃಂದದ ಸಹಾಯಕ ನಿರ್ದೇಶಕ(ಗ್ರಾಮೀಣ ಉದ್ಯೋಗ) ಎಂಬ ವೃಂದವನ್ನು 176 ಹುದ್ದೆಗಳೊಂದಿಗೆ ಕರ್ನಾಟಕ ಸಾಮಾನ್ಯ ಸೇವೆ(ಅಭಿವೃದ್ಧಿ ಶಾಖೆ ಹಾಗೂ ಸ್ಥಳೀಯ ಆಡಳಿತ ಶಾಖೆ)ಯ ಮುಖ್ಯ ವಾಹಿನಿಗೆ ತಂದು, ಸದರಿ ಹುದ್ದೆಗಳನ್ನು ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ವೃಂದಕ್ಕೆ ಶೇಕಡ 60ರ ಖೋಟಾದಲ್ಲಿ ಮುಂಬಡ್ತಿ ನೀಡುವ ಸಲುವಾಗಿ ಪೋಷಕ ವೃಂದವೆಂದು ನಮೂದಿಸುವ ಬಗ್ಗೆ ಹಾಗೂ ಸದರಿ ವೃಂದದ ಎಲ್ಲಾ ಹುದ್ದೆಗಳನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೃಂದದಿಂದ ಮುಂಬಡ್ತಿ ಮೂಲಕ ತುಂಬುವ ಬಗ್ಗೆ ಪ್ರಸ್ತಾವಿತ ಕರಡು ವೃಂದ ಮತ್ತು ನೇಮಕಾತಿ ತಿದ್ದುಪಡಿ ನಿಯಮಗಳನ್ನು ಪರಿಷ್ಕರಿಸಿ ಪರಿಷ್ಕೃತ ಕರಡನ್ನು ಸಚಿವ ಸಂಪುಟದ ಅನುಮೋದನೆಯೊಂದಿಗೆ ಪ್ರಕಟಿಸಲು ಸಭೆಯು ಅನುಮೋದಿಸಿತು.

ಅಧ್ಯಕ್ಷರಿಗೆ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

(ಕೆ. ಜೈರಾಜ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ

ಅನುಬಂಧ-5

ದಿನಾಂಕ 14.12.2011ರಂದು ಸರ್ಕಾರದ ಕಾರ್ಯದರ್ಶಿ (ಪಂಚಾಯತ್ ರಾಜ್)ರವರ ಅಧ್ಯಕ್ಷತೆಯಲ್ಲಿ ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಗಳು

1) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯ ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಆಡಳಿತ ಶಾಖೆ)ಗೆ ಸೇರಿದ ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ), ಈ ಗ್ರೂಪ್-'ಬಿ' ವೃಂದದ 176 ಹುದ್ದೆಗಳನ್ನು ಪೋಷಕ ವೃಂದವಾದ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೃಂದದಿಂದ ಮುಂಬಡ್ತಿ ನೀಡುವ ಮೂಲಕ ತುಂಬುವ ಬಗೆಗಿನ ಪ್ರಸ್ತಾವವನ್ನು ಇಲಾಖಾ ಮುಂಬಡ್ತಿ ಸಮಿತಿಯ ಪರಿಗಣನೆಗಾಗಿ ಮಂಡಿಸಿರುವ ಅಂಶವನ್ನು ಸಮಿತಿಗೆ ತಿಳಿಸಲಾಯಿತು.

2) ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಆಡಳಿತ ಶಾಖೆ)ಗೆ ಸಂಬಂಧಿಸಿದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ), ಈ ಗ್ರೂಪ್-ಬಿ ವೃಂದದ ಹುದ್ದೆಗಳನ್ನು ತುಂಬಲು ಈ ಕೆಳಕಂಡಂತೆ ನೇಮಕಾತಿ ಕಾರ್ಯ ವಿಧಾನವನ್ನು ನಿಗದಿಪಡಿಸಲಾಗಿರುವ ಅಂಶವನ್ನು ಸಮಿತಿಯ ಗಮನಕ್ಕೆ ತರಲಾಯಿತು.

ಕ್ರಮ ಸಂಖ್ಯೆ	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ		ನೇಮಕಾತಿ ವಿಧಾನ	ಕನಿಷ್ಠ ವಿದ್ಯಾರ್ಹತೆ
		ಖಾಯಂ	ತಾತ್ಕಾಲಿಕ		
೬)	ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) (ರೂ.11400 – 21600)	–	176	ಪಂಚಾಯತ್ ಅಭಿವೃದ್ಧಿ ಅಧಿಕಾರಿ ವೃಂದದಿಂದ ಮುಂಬಡ್ತಿ ಮೂಲಕ	ಸಂದರ್ಭಾನುಸಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿ ವೃಂದದಲ್ಲಿ ಅಥವಾ ಪಂಚಾಯತ್ ವಿಸ್ತರಣಾಧಿಕಾರಿ ವೃಂದದಲ್ಲಿ ಅಥವಾ ಈ ಎರಡೂ ವೃಂದಗಳು ಸೇರಿದಂತೆ ಒಟ್ಟಾರೆ 5 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರಬೇಕು. ಪರಂತು, ಪಂಚಾಯತ್ ಅಭಿವೃದ್ಧಿ ಅಧಿಕಾರಿ ವೃಂದದಲ್ಲಿ ಅಥವಾ ಪಂಚಾಯತ್ ವಿಸ್ತರಣಾಧಿಕಾರಿ ವೃಂದದಲ್ಲಿ ಅಥವಾ ಈ ಎರಡೂ ವೃಂದಗಳು ಸೇರಿದಂತೆ ಒಟ್ಟಾರೆ 5 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರುವ ಅರ್ಹ ವ್ಯಕ್ತಿಗಳು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ಈ ಯಾವುದೇ ವೃಂದದಲ್ಲಿ ಅಥವಾ ಎರಡೂ ವೃಂದಗಳಲ್ಲಿ ಒಟ್ಟಾರೆ 3 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರುವ ವ್ಯಕ್ತಿಗಳನ್ನು ಪರಿಗಣಿಸಬಹುದು.

3) ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ವೃಂದಕ್ಕೆ ಇಲಾಖಾ ಪರೀಕ್ಷೆಗಳನ್ನು ನಿಗದಿಪಡಿಸುವ ಪ್ರಸ್ತಾವವು ಈಗಾಗಲೇ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಮುಂದಿದ್ದು ಸದರಿ ಇಲಾಖೆಯು ಅಂತಿಮವಾಗಿ ಕರ್ನಾಟಕ ಸಿವಿಲ್ ಸೇವಾ (ಸೇವೆ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳ ಅನುಸೂಚಿಗೆ ತಿದ್ದುಪಡಿ ತಂದಿರುವುದಿಲ್ಲ. ಅಂದರೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ವೃಂದಕ್ಕೆ ಹಾಲಿ ಯಾವುದೇ ಇಲಾಖಾ ಪರೀಕ್ಷೆ ನಿಗಧಿಯಾಗಿಲ್ಲದಿರುವುದರಿಂದ ತತ್ಪರಿಣಾಮ ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ವೃಂದಕ್ಕೂ ಯಾವುದೇ ಇಲಾಖಾ ಪರೀಕ್ಷೆಗಳನ್ನು ಇನ್ನೂ ನಿಗಧಿಪಡಿಸದೇ ಇರುವ ಹಿನ್ನೆಲೆಯಲ್ಲಿ ಆ ಕುರಿತಾದ ನಿಬಂಧನೆಯನ್ನು ವಿಧಿಸುವ ಪ್ರಸಂಗವಿರುವುದಿಲ್ಲವೆಂಬ ಅಂಶವನ್ನು ಸಮಿತಿಯ ಗಮನಕ್ಕೆ ತರಲಾಯಿತು.

4) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪಂಚಾಯತ್ ರಾಜ್ ವಿಭಾಗವು, ದಿನಾಂಕ 4.3.2010ರಂದು ಪಂಚಾಯತ್ ವಿಸ್ತರಣಾಧಿಕಾರಿಗಳ ವೃಂದವನ್ನು ನೂತನವಾಗಿ ಸೃಜನೆಗೊಂಡ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ವೃಂದದಲ್ಲಿ ವಿಲೀನಗೊಳಿಸಿದ್ದು ಅದರನ್ವಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ 'ನಿರ್ವಹಣಾ ಜೇಷ್ಠತಾ ಪಟ್ಟಿ'ಯನ್ನು ರಚಿಸಿ ಒದಗಿಸಿದ್ದನ್ನು ಆಧರಿಸಿ ಪರಿಗಣನಾ ವಲಯದಲ್ಲಿ ಬರುವ 176 ಅರ್ಹ ಅಭ್ಯರ್ಥಿಗಳ ಸೇವಾ ವಿವರಗಳನ್ನು ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳಿಂದ ಪಡೆಯಲಾಗಿರುವುದನ್ನು ಸಮಿತಿಯು ಗಮನಿಸಿತು. ಮುಂದುವರೆದು, ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ದಿನಾಂಕ 9.10.1985ರ ಅಧಿಕೃತ ಜ್ಞಾಪನ ಸಂಖ್ಯೆ ಡಿಪಿಎಆರ್ 05 ಎಸ್‌ಆರ್‌ಸಿ 84ರ ಕಂಡಿಕೆ 4 ರ ಪ್ರಕಾರ ಒಟ್ಟಾರೆ ಖಾಲಿ ಹುದ್ದೆಗಳ ಶೇಕಡ 25ರಷ್ಟು ಅಭ್ಯರ್ಥಿಗಳ ಪ್ರಕರಣಗಳನ್ನೂ ಸಹ ಹೆಚ್ಚುವರಿಯಾಗಿ ಪರಿಗಣನಾ ವಲಯಕ್ಕೆ ತಂದು ಇಲಾಖಾ ಮುಂಬಡ್ತಿ ಸಮಿತಿಯ ಮುಂದೆ ಮಂಡಿಸಲು ಅವಕಾಶವಿರುವುದರಿಂದ ಅದರಂತೆ ಹೆಚ್ಚುವರಿಯಾಗಿ ಪರಿಗಣನಾ ವಲಯದ ವ್ಯಾಪ್ತಿಗೆ ಬರುವ 44 ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ವಿವರಗಳನ್ನೂ ಸಹ ಸಮಿತಿಯ ಗಮನಕ್ಕೆ ತರಲಾಯಿತು.

5) ಪರಿಗಣನಾ ವಲಯದಲ್ಲಿ ಬರುವ ಒಟ್ಟಾರೆ ಅಭ್ಯರ್ಥಿಗಳ ಪೈಕಿ ಮೂಲ ಪಟ್ಟಿಯ ಕ್ರಮ ಸಂಖ್ಯೆ: 17, 75, 109, 119, 136, 141 ಮತ್ತು 175ರಲ್ಲಿನ ಅಭ್ಯರ್ಥಿಗಳ ಹಾಗೂ ಹೆಚ್ಚುವರಿ ಪಟ್ಟಿಯ ಕ್ರಮ ಸಂಖ್ಯೆ: 185 ಮತ್ತು 209 ರಲ್ಲಿನ ಒಟ್ಟಾರೆ 9 ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ಬಂದಿಲ್ಲದಿರುವುದನ್ನು ಸಮಿತಿಯು ಗಣನೆಗೆ ತೆಗೆದುಕೊಂಡು ಅವರುಗಳ ಪ್ರಕರಣಗಳನ್ನು ಸದ್ಯಕ್ಕೆ ಮೂಂದೂಡಲು ತೀರ್ಮಾನಿಸಿತು. ಅದೇ ರೀತಿ ಮೂಲ ಪಟ್ಟಿಯ ಕ್ರಮ ಸಂಖ್ಯೆ 15 ಮತ್ತು 120 ರಲ್ಲಿನ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಸಂಪೂರ್ಣ ಮಾಹಿತಿ ಲಭ್ಯವಾಗಿಲ್ಲದ ಕಾರಣ ಈ 2 ಮಂದಿಯ ಪ್ರಕರಣಗಳನ್ನೂ ಸಹ ಮುಂದೂಡಲು ಸಮಿತಿಯ ನಿರ್ಣಯಿಸಿತು.

6) ಮುಂದುವರೆದು, ಮೂಲ ಪಟ್ಟಿಯ ಕ್ರಮ ಸಂಖ್ಯೆ: 6, 14, 29, 46, 66, 70, 90, 125, 150, 169ರಲ್ಲಿನ ಅಭ್ಯರ್ಥಿಗಳ ಮತ್ತು ಹೆಚ್ಚುವರಿ ಪಟ್ಟಿಯ ಕ್ರಮ ಸಂಖ್ಯೆ 187ರ ಒಟ್ಟು 11 ಅಭ್ಯರ್ಥಿಗಳ ಕುರಿತಂತೆ 5 ವರ್ಷಗಳ ಕಾರ್ಯನಿರ್ವಹಣಾ ವರದಿಗಳ ಬದಲಾಗಿ 3, 4 ಹಾಗೂ 5 ವರ್ಷಗಳಿಗೆ, ಯಾವುದೇ ಸಕಾರಣಗಳನ್ನು ದಾಖಲಿಸದೇ, ಕೇವಲ ವಿಶೇಷ ವರದಿಗಳನ್ನು ಮಾತ್ರ ಒದಗಿಸಲಾಗಿರುವುದನ್ನು ಸಮಿತಿಯು ಗಮನಿಸಿ, ಈ 11 ಪ್ರಕರಣಗಳನ್ನೂ ಕೂಡ ಸದ್ಯಕ್ಕೆ ಮುಂದೂಡಲು ನಿರ್ಣಯಿಸಿತು.

7) ಉಳಿದಂತೆ, ಮೂಲ ಪಟ್ಟಿಯ ಕ್ರಮ ಸಂಖ್ಯೆ 123, 156 ಮತ್ತು 162 ರಲ್ಲಿನ ಅಭ್ಯರ್ಥಿಗಳ ಮತ್ತು ಹೆಚ್ಚುವರಿ ಪಟ್ಟಿಯ ಕ್ರಮ ಸಂಖ್ಯೆ 204 ಹಾಗೂ 218ರಲ್ಲಿನ ಅಭ್ಯರ್ಥಿಗಳ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರುವ ಅಂಶವನ್ನು ಹಾಗೂ ಮೂಲ ಪಟ್ಟಿಯ ಕ್ರ.ಸಂ. 64, 76 ಹಾಗೂ 145ರಲ್ಲಿರುವ ಅಭ್ಯರ್ಥಿಗಳು ಅಮಾನತ್ತಿನಲ್ಲಿರುವ ಅಂಶವನ್ನು ಗಣನೆಗೆ ತೆಗೆದುಕೊಂಡು ಈ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಇಲಾಖಾ ಮುಂಬಡ್ತಿ ಸಮಿತಿಯ ಅಭಿಪ್ರಾಯವನ್ನು ದಾಖಲಿಸಿ ಮುಚ್ಚಿದ ಲಕೋಟೆಯಲ್ಲಿ ಇಡಲು ಸಮಿತಿಯು ತೀರ್ಮಾನಿಸಿತು.

8) ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ವೃಂದವು ಗ್ರೂಪ್ 'ಬಿ' ವೃಂದದ ಹುದ್ದೆಯಾಗಿದ್ದು ಗ್ರೂಪ್ 'ಸಿ' ವೃಂದದ ಹುದ್ದೆಗಳನ್ನು ಪೋಷಕ ವೃಂದದ ಹುದ್ದೆಗಳನ್ನಾಗಿ ಪರಿಗಣಿಸಿರುವುದರಿಂದ ಈ ಮುಂಬಡ್ತಿ ಪ್ರಸ್ತಾವಕ್ಕೆ ಮೀಸಲಾತಿ ನಿಯಮಗಳು ಅನ್ವಯವಾಗುತ್ತದೆಂಬುದನ್ನು ಸಮಿತಿಯು ಗಮನಿಸಿತು. ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 22 ಎಸ್‌ಬಿಸಿ 79, ದಿನಾಂಕ 30.8.1979ರ ಪ್ರಕಾರ 33 ಹುದ್ದೆಗಳ ಸೈಕಲ್‌ನಲ್ಲಿ 5 ಹುದ್ದೆಗಳನ್ನು ಪರಿಶಿಷ್ಟ ಜಾತಿಗೂ ಹಾಗೂ 1 ಹುದ್ದೆಯನ್ನು ಪರಿಶಿಷ್ಟ ಪಂಗಡಕ್ಕೂ ಮೀಸಲಿಡುವುದು ಅಗತ್ಯವಾಗಿರುವ ಅಂಶವನ್ನು ಸಮಿತಿಯ ಗಮನಕ್ಕೆ ತರಲಾಯಿತು. ಪರಿಗಣನೆಗಿರುವ 176 ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ಹುದ್ದೆಗಳಿಗೆ ಮೊದಲ ಬಾರಿಗೆ ಮುಂಬಡ್ತಿ ನೀಡಲು ಪ್ರಸ್ತಾವಿಸಿರುವುದರಿಂದ ಮೀಸಲಾತಿ ರೋಸ್ಟರ್ ಚಕ್ರದ ಮೊದಲನೇ ಬಿಂದುವಿನಿಂದ ಪ್ರಾರಂಭಿಸಿ ಪರಿಶಿಷ್ಟ ಜಾತಿಗೆ ಸೇರಿದ 27 ಅಭ್ಯರ್ಥಿಗಳಿಗೆ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ 6 ಅಭ್ಯರ್ಥಿಗಳಿಗೆ ಪ್ರಾತಿನಿಧ್ಯ ನೀಡಬೇಕಾಗುತ್ತದೆಂಬುದನ್ನು ಸಮಿತಿಯ ಗಮನಕ್ಕೆ ತರಲಾಯಿತು. ಮೂಲ ಪಟ್ಟಿಯ ಒಟ್ಟಾರೆ 176 ಮಂದಿಯ ಪೈಕಿ ಕ್ರಮ ಸಂಖ್ಯೆ: 1, 2, 62, 92, 109, 115, 118, 143, 144, 145, 146, 148, 168, 172, 173, 174, 175 ಮತ್ತು 176 ರಲ್ಲಿನ 18 ಪರಿಶಿಷ್ಟ ಜಾತಿ ಅಭ್ಯರ್ಥಿಗಳು ಮಾತ್ರ ಲಭ್ಯವಿರುವುದನ್ನು ಸಮಿತಿಯು ಗಮನಿಸಿತು. ಆದ್ದರಿಂದ ಉಳಿದ 9 ಹುದ್ದೆಗಳನ್ನು ಬ್ಯಾಕ್‌ಲಾಗ್ ಹುದ್ದೆಗಳೆಂದು ಪರಿಗಣಿಸಲು ಸಮಿತಿಯು ತೀರ್ಮಾನಿಸಿತು. ಆದರೆ, ಪರಿಶಿಷ್ಟ ಪಂಗಡಕ್ಕೆ ಮೀಸಲಿಡಲಾಗಿರುವ 6 ಹುದ್ದೆಗಳ ಎದುರಿಗೆ ಮೂಲ ಪಟ್ಟಿಯ ಕ್ರಮ ಸಂಖ್ಯೆ: 11, 12, 75, 90, 96, 127, 167 ಮತ್ತು ಹೆಚ್ಚುವರಿ ಪಟ್ಟಿಯ ಕ್ರಮ ಸಂಖ್ಯೆ 192ರ ಅಭ್ಯರ್ಥಿಗಳು ಅವರ ಜೇಷ್ಠತೆಯ ಆಧಾರದಲ್ಲೇ ಲಭ್ಯವಿರುವುದನ್ನು ಸಮಿತಿಯು ಗಣನೆಗೆ ತೆಗೆದುಕೊಂಡಿತು.

9) ಸಾಂದರ್ಭಿಕವಾಗಿ ನೇರ ನೇಮಕಾತಿ ಹೊಂದಿರುವ ಕೆಲವು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಮುಂದೆ ಅರ್ಜಿ ಸಂಖ್ಯೆ: 6801–6805/2011 ಗಳನ್ನು ದಾಖಲಿಸಿ (ಶ್ರೀ ರಮೇಶ್ ಮತ್ತು ಇತರರು) ಪ್ರಸ್ತಾವಿತ ಮುಂಬಡ್ತಿಯನ್ನು ಪ್ರಶ್ನಿಸಿರುವರಲ್ಲದೇ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೃಂದದ ಹುದ್ದೆಗಳಲ್ಲಿ ವಿಲೀನಗೊಂಡ ಪಂಚಾಯತಿ ವಿಸ್ತರಣಾಧಿಕಾರಿಗಳ ಹಾಗೂ ನೇರ ನೇಮಕಾತಿ ಮೂಲಕ ನೇಮಕಗೊಂಡಿರುವ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಜೇಷ್ಠತಾ ಪಟ್ಟಿಯನ್ನು ತಯಾರಿಸಲು ನಿರ್ದೇಶನ ನೀಡಲು ಕೋರಿರುವ ಅಂಶವನ್ನು ಸಮಿತಿಯ ಗಮನಕ್ಕೆ ತರಲಾಯಿತು. ಮುಂದುವರೆದು, ಈ ಪ್ರಕರಣದಲ್ಲಿ ಮಾನ್ಯ ನ್ಯಾಯ ಮಂಡಳಿಯು ತನ್ನ ದಿನಾಂಕ 25.11.2011 ರ ಮಧ್ಯಂತರ ಆದೇಶದಲ್ಲಿ, **"the promotion to the posts of Assistant Directors (Rural Employment) from the cadre of Panchayat Development Officers until the disposal of this application shall be subject to the decision on these applications"** ಎಂದು ಸೂಚಿಸಿರುವ ಅಂಶವನ್ನೂ ಸಹ ಸಮಿತಿಯ ಗಮನಕ್ಕೆ ತಂದು ಇದರನ್ವಯ ಪ್ರಸ್ತಾವಿತ ಮುಂಬಡ್ತಿಗೆ ಯಾವುದೇ ಅಡಚಣೆ ಇಲ್ಲದ ಅಂಶವನ್ನು ಸಮಿತಿಯ ಗಮನಕ್ಕೆ ತರಲಾಯಿತು. ಜೊತೆಗೆ, ಶ್ರೀ ರಮೇಶ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ,(ಅರ್ಜಿದಾರರಲ್ಲಿ ಒಬ್ಬರು), ಇವರು ದಿನಾಂಕ: 26.11.2011ರಂದು ಇ-ಮೇಲ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿ ರಾಜ್ಯಮಟ್ಟದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಜೇಷ್ಠತಾ ಪಟ್ಟಿ ಇಲ್ಲದೇ ಮುಂಬಡ್ತಿ ಪ್ರಕ್ರಿಯೆಯನ್ನು ಕೈಗೆತ್ತಿಕೊಂಡಿರುವ ಬಗ್ಗೆ ಪ್ರಸ್ತಾಪಿಸಿ ಸದರಿ ಪಟ್ಟಿಯು ಅಂತಿಮವಾಗಿ

ಪ್ರಕಟಗೊಳ್ಳುವವರೆಗೆ ಮುಂಬಡ್ತಿ ಪ್ರಕ್ರಿಯೆಯನ್ನು ಮುಂದುವರೆಸಬಾರದೆಂದು ಕೋರಿದ್ದನ್ನು ಪರಿಶೀಲಿಸಿ ಅವರಿಗೆ ದಿನಾಂಕ: 14.12.2011ರಂದು ವಿವರವಾದ ಹಿಂಬರಹ ನೀಡಿರುವ ಅಂಶವನ್ನೂ ಸಹ ಸಮಿತಿಯ ಗಮನಕ್ಕೆ ತರಲಾಯಿತು. ಆದ್ದರಿಂದ ಪ್ರಸ್ತುತ ನೀಡಲು ಉದ್ದೇಶಿಸಿರುವ ಮುಂಬಡ್ತಿಯು ನ್ಯಾಯ ಮಂಡಳಿಯು ಈ ಸಂಬಂಧದಲ್ಲಿ ನೀಡುವ ಅಂತಿಮ ತೀರ್ಪಿಗೆ ಒಳಪಟ್ಟಿದೆ ಎಂಬ ಷರತ್ತನ್ನು ಮುಂಬಡ್ತಿ ಆದೇಶದಲ್ಲಿ ನಮೂದಿಸಲು ಸಮಿತಿಯು ಸೂಚಿಸಿತು.

10) ಈ ಪ್ರಕಾರವಾಗಿ ಪ್ರಕರಣವನ್ನು ಎಲ್ಲಾ ದೃಷ್ಟಿ ಕೋನಗಳಿಂದಲೂ ಸಮಗ್ರವಾಗಿ ಪರಿಶೀಲಿಸಿ ಲಗತ್ತಿಸಿರುವ ಪಟ್ಟಿಯಲ್ಲಿನ 190 ಅಭ್ಯರ್ಥಿಗಳ ಪ್ರಕರಣಗಳು ಪರಿಗಣನೆಗೆ ಅರ್ಹವಾಗಿದೆ ಎಂದು ಸಮಿತಿಯು ತೀರ್ಮಾನಿಸಿತು.

11) ಈ ಅಭ್ಯರ್ಥಿಗಳ ಕಳೆದ 5 ವರ್ಷಗಳ ಕಾರ್ಯನಿರ್ವಹಣಾ ವರದಿಗಳು ತೃಪ್ತಿಕರವಾಗಿರುವುದನ್ನು ಸಮಿತಿಯು ಗಣನೆಗೆ ತೆಗೆದುಕೊಂಡಿತು. ಜೊತೆಗೆ ಇವರುಗಳ ವಿರುದ್ಧ ಯಾವುದೇ ಇಲಾಖಾ ವಿಚಾರಣೆಯಾಗಲೀ ಅಥವಾ ಕ್ರಿಮಿನಲ್ ಮೊಕದ್ದಮೆಯಾಗಲೀ ಬಾಕಿ ಇರುವುದಿಲ್ಲ ಅಥವಾ ಹೂಡಲು ಉದ್ದೇಶಿಸಿಲ್ಲದ ಅಂಶವನ್ನೂ ಸಹ ಸಮಿತಿಯು ಗಣನೆಗೆ ತೆಗೆದುಕೊಂಡಿತು.

12) ಮೇಲಿನ ಕಂಡಿಕೆಗಳಲ್ಲಿ ವಿವರಿಸಿರುವ ಸನ್ನಿವೇಶಗಳ ಹಿನ್ನೆಲೆಯಲ್ಲಿ ಅರ್ಜಿ ಸಂಖ್ಯೆ: 6801-6805/2011ಗಳಲ್ಲಿ ಮಾನ್ಯ ಆಡಳಿತ ನ್ಯಾಯ ಮಂಡಳಿಯು ನೀಡುವ ಅಂತಿಮ ತೀರ್ಪಿಗೆ ಒಳಪಟ್ಟು ಅನುಬಂಧದಲ್ಲಿ ಪಟ್ಟಿ ಮಾಡಿರುವ 190 ಅಭ್ಯರ್ಥಿಗಳ ಪೈಕಿ 176 ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಜೇಷ್ಠತೆ ಮತ್ತು ಅರ್ಹತೆ ಹಾಗೂ ಮೀಸಲಾತಿ ರೋಸ್ಟರ್ ಅನ್ವಯ ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ವೃಂದಕ್ಕೆ ಸ್ಥಾನಪನ್ನ ಮುಂಬಡ್ತಿ ನೀಡಲು ಇಲಾಖಾ ಮುಂಬಡ್ತಿ ಸಮಿತಿಯು ಶಿಫಾರಸ್ಸು ಮಾಡಿತು.

(ಡಾ: ಶಾಲಿನಿ ರಜನೀಶ್)
ಸರ್ಕಾರದ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಅಧ್ಯಕ್ಷರು

(ಬಿ.ವಿ. ಕುಮಾರಸ್ವಾಮಿ)
ಸರ್ಕಾರದ ಉಪ ಕಾರ್ಯದರ್ಶಿ (ಆ-1)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಸದಸ್ಯರು

(ಪಿ. ಕುಮಾರ್)
ನಿರ್ದೇಶಕರು (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಸದಸ್ಯರು

(ಎಸ್.ಯು. ಶಿವಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇ-ಬಿ ಮತ್ತು ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಸದಸ್ಯ ಕಾರ್ಯದರ್ಶಿ

ದಿನಾಂಕ 14.12.2011ರಂದು ಸರ್ಕಾರದ ಕಾರ್ಯದರ್ಶಿ (ಪಂಚಾಯತ್ ರಾಜ್)ರವರ ಅಧ್ಯಕ್ಷತೆಯಲ್ಲಿ ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಯ ಅನುಬಂಧ

ಕ್ರಮ ಸಂಖ್ಯೆ	ನೌಕರರ ಹೆಸರು	ಕ್ರಮ ಸಂಖ್ಯೆ	ನೌಕರರ ಹೆಸರು
1	ಹೆಚ್.ಎ. ಭಜಂತ್ರಿ ಪ.ಜಾ.	39	ಟಿ.ವಿ. ಅರುಣಕುಮಾರ್
2	ಸಿ.ಹೆಚ್. ಖಾದ್ರಿ ಪ.ಜಾ.	40	ಪ್ರಭಯ್ಯ ಕಾಶೀನಾಥಯ್ಯ
3	ಚಿಕ್ಕರಂಗಯ್ಯ	41	ಚಂದ್ರಲಿಂಗಾಗೌಡ
4	ಸಿ. ಶಂಕರಪ್ಪ	42	ಸೈಯದ್ ಹಜರತ್ ಪಾಷ
5	ವಿ.ಡಿ. ನಾಯ್ಕ	43	ಆರ್. ಮಧುಕುಮಾರ್
6	ವ್ಯಾಸರಾಜ್	44	ಎಸ್.ಎಂ. ಕುಂದೂರ್
7	ಟಿ. ನಂದಕುಮಾರ್	45	ಶ್ರೀಧರ ಸುಬ್ರಾಯ ಭಟ್
8	ಸಿ.ಎಂ. ರಂಗಸ್ವಾಮಯ್ಯ	46	ಎ.ಜಿ. ತೋಟದ್
9	ಕೆ.ವಿ. ಭಾಸ್ಕರ್	47	ಬಸವರಾಜ್ ಕಲ್ಲಪ್ಪ ಐಯ್ಯಣ್ಣನವರ್
10	ಎಸ್.ಆರ್. ಜಯದೇವಪ್ಪ ಪ.ಪಂ.	48	ಶರಣಬಸಪ್ಪ
11	ಜಿ.ಎಂ. ಬಸಣ್ಣ ಪ.ಪಂ	49	ಜೆ. ಮಲ್ಲೇಶಪ್ಪ
12	ಎಸ್.ಎಸ್. ಹಿರೇಮಠ	50	ಸಿ. ಕೆಂಪೇಗೌಡ
13	ಬಿ.ಎಲ್. ಬೈರವಾಡಗಿ	51	ಎಸ್.ಬಿ. ಲಕ್ಷ್ಮೇಶ್ವರ
14	ಟಿ. ಎಂ. ಜಂಬಗಿ	52	ಡಿ.ಆರ್. ಶಿವಪ್ಪ
15	ಸಿ.ಜಿ. ಬೋಳಸೂರ್	53	ಎಂ.ವಿ. ಬದಿ
16	ಎ.ಎಸ್. ಉರಕಡ್ಲಿ	54	ಕೆ.ಎನ್. ಮಹಂತೇಶಪ್ಪ
17	ಶಂಕರಪ್ಪ	55	ಗುರುನಾಥ ಶೇಟಗಾರ
18	ಎಸ್.ವಿ. ಪ್ರಸನ್ನಕುಮಾರ್	56	ಮಾಣಿಕ್ ಪ.ಜಾ.
19	ಡಿ.ಎಂ. ಚಂದ್ರಶೇಖರ	57	ಈರಣ್ಣ ಪಾಟೀಲ್
20	ಆರ್. ಸೊಣ್ಣೇಗೌಡ	58	ಬಿ.ಎಂ.ಎನ್. ವೀರಯ್ಯ
21	ಎ. ಚಂದ್ರಶೇಖರಪ್ಪ	59	ಪಿ. ಸನಾವುಲ್ಲಾ
22	ಪಾಂಡುರಂಗಪ್ಪ	60	ರಮೇಶ್ ಬಾಬು
23	ಮುಕಬುಲ್ ಅಹ್ಮದ್	61	ಡಿ. ಜಾನಕಿರಾಮ್
24	ಎಸ್.ಕೆ. ಗಾಣಿಗೇರಾ	62	ವೈ.ಕೆ. ಸಾಂಬ್ರೇಕರ್
25	ಸದಾನಂದ ಆರ್. ನಾಯಕ್	63	ಆರ್. ಪಣೇಂದ್ರ
26	ಶ್ರೀಧರಭಟ್ಟ	64	ಹೆಚ್.ಎನ್. ರಂಗನಾಥ್
27	ಬೆಟ್ಟಸ್ವಾಮಿಗೌಡ	65	ಎಸ್.ಎಂ.ಡಿ. ಇಸ್ಮಾಯಿಲ್
28	ಭೀಮೇಶ್ವರ ರೆಡ್ಡಿ	66	ಎಂ.ಎಫ್. ಕೊರಬ
29	ಹೆಚ್.ಸಿ. ಸುರೇಶ್	67	ಎಸ್.ಎನ್. ದಿಬ್ಬದಮನಿ
30	ಸಿಪ್ರಿಯಾನ್ ಮಿರಾಂಡ್	68	ಜಗನ್ನಾಥ್ ಬಿನ್ ಮಾಣಿಕ
31	ಬಿ. ವಿಕ್ರಮಗೌಡ	69	ಸಿದ್ದಯ್ಯ ವೀರಭದ್ರಯ್ಯ
32	ವಿಜಯಕುಮಾರ್	70	ಹಸನ್
33	ಎಂ. ಮೂಕಪ್ಪಗೌಡ	71	ದ್ಯಾಲಪ್ಪ ಮಾಯಗೇರಿ
34	ಎಂ.ಟಿ. ಬೋರಯ್ಯ	72	ಎನ್. ಕೆಂಚಪ್ಪ
35	ವೈ.ಎಸ್. ಬಡಿಗೇರ	73	ಡಿ.ಎಂ. ಜಿನವಾಡ
36	ಜಿ.ಬಿ. ಹೂಗಾರ	74	ಶೇಖರನಾಯಕ
37	ಎಂ.ಬಿ. ಕುರಮರಿ	75	ಸಿ.ಎಸ್. ಚೌಕಿಮಠ
38	ಎಂ.ಎ. ಮುಲ್ಲಾ	76	ವಾಮನ ಪರಮೇಶ್ವರ ಮಡಿವಾಳ

77	ಎಸ್.ಬಿ. ಪಾಟೀಲ	115	ಸಿ.ಎನ್. ಮೌನೇಶ್
78	ಎಸ್.ಎಸ್. ರಾಯ್‌ಕರ್	116	ವೆಂಕಟೇಶ್ ಹೆಚ್.
79	ಎಡನ್‌ಷನ್ ಫರ್ನಾಂಡಿಸ್	117	ಕೆ.ಬಿ. ಮುದ್ದಪ್ಪ
80	ಕಂಚವೀರ ವೀರಣ್ಣ ಪ.ಜಾ.	118	ಹೆಚ್. ರುದ್ರಪ್ಪ
81	ವಿಜಯಕುಮಾರ್ ಮಡ್ಡೆ	119	ಹೆಚ್.ಎನ್. ತಿಮ್ಮಪ್ಪ
82	ಎಸ್.ಎಸ್. ಗಂಗಾಧರಪ್ಪ .	120	ಜಿ. ಮುರುಗೇಂದ್ರಪ್ಪ
83	ಎಸ್.ಎಲ್. ಗಂಗಾಧರಮೂರ್ತಿ	121	ಅಮರಪ್ಪ ಗಂಗನಗೌಡರ
84	ಹನುಮಗೌಡ ಪ.ಪಂ	122	ಆರ್. ಉಮೇಶ್
85	ಎ.ಎಂ. ಹೊಳಲಯ್ಯ	123	ಬಿ.ಡಿ. ರಾಜೇಂದ್ರ
86	ಮಾದಯ್ಯ ಹನುಮಂತಯ್ಯಸ್ವಾಮಿ	124	ಕೆ.ಪಿ. ಸಂಜೀವಪ್ಪ ಪ.ಜಾ.
87	ಕೆ.ಆರ್. ಪೆಡ್ನೇಕರ	125	ಟಿ. ಸಿದ್ದಪ್ಪ ಪ.ಜಾ.
88	ಪ್ರಾಣೇಶರಾವ್	126	ವಿಠಲ್ ಭೀಮಸು ನಾಟೀಕರ್ ಪ.ಜಾ.
89	ಎಂ.ಆರ್. ಪ್ರಕಾಶ್	127	ವಿಜಯಕುಮಾರ್
90	ಶರಣಪ್ಪಗೌಡ ಪಾಟೀಲ	128	ಜಿ. ಧನರಾಜು ಪ.ಜಾ.
91	ಗಿರಿಜಾ ಶಂಕರ್	129	ಎಸ್.ಎಸ್. ಖಾದ್ರೊಳಿ
92	ಕೆ.ಆರ್. ಉಮಾಪತಿ	130	ಎಂ. ಶಿವಲಿಂಗಪ್ಪ
93	ಎ. ಶ್ರೀನಿವಾಸರಾವ್	131	ಟಿ. ಚನ್ನೇಗೌಡ
94	ಜಿ.ಎಸ್. ಓಂಕಾರಪ್ಪ	132	ಜಿ. ಶ್ರೀಕಂಠರಾಜೇ ಅರಸ್
95	ಶಿವಕುಮಾರ್	133	ವಿರುಪಾಕ್ಷಪ್ಪ ದೇವದುರ್ಗ
96	ಮಹಮದ್ ಮುಬೀನ್	134	ವಿಜಯಕುಮಾರ್
97	ಟಿ. ತಿಪ್ಪೇಸ್ವಾಮಿ	135	ಶಿವಶಂಕರ ಕುಡತಿನಿ
98	ಯು.ಕೆ. ಲೀಲಾವತಿ	136	ಎನ್. ಉಷಾ
99	ಬಿ.ಎಲ್. ಮಂಜುನಾಥ	137	ಎ. ಶಂಕರರಾವ್
100	ಎಸ್.ಎಸ್. ಅಂಗಡಿ	138	ಕೆ.ಬಿ. ಶ್ರೀನಿವಾಸ್
101	ಎಸ್.ಜಿ. ಪೋತದಾರ	139	ಎಂ. ರಾಮೇಗೌಡ
102	ಎಸ್.ಬಿ. ಗೊಳಸಂಗಿ ಪ.ಜಾ.	140	ಎಲ್. ಬೋರಯ್ಯ
103	ಆರ್.ಕೆ. ರಾಠೋಡ	141	ಎನ್. ಶ್ರೀನಿವಾಸ
104	ಎಸ್.ಎಸ್. ಬಿರಾದಾರ	142	ಕೆ.ಬಿ. ಪುಟ್ಟಸ್ವಾಮಿ
105	ಕೆ.ಹೆಚ್. ಕೃಷ್ಣಮೂರ್ತಿ ಪ.ಜಾ.	143	ವಿರೂಪಾಕ್ಷಗೌಡ ಪಾಟೀಲ
106	ಪಿ.ಜಿ. ಹಂದಿಗನೂರ	144	ಎಸ್. ಜಗದೀಶ್ ಪ.ಪಂ
107	ಎಸ್.ಎಂ. ಶೇಡಗಿ	145	ಎಂ.ಕೆ. ಛಲವಾದಿ ಪ.ಜಾ.
108	ಆರ್.ಎನ್. ರೇವಣ್ಣನವರ	146	ತ್ರಿಲೋಚನಾ ವೀರಭದ್ರಪ್ಪ
109	ಎಸ್. ಕುಮಾರ್	147	ಶಾಂತಪ್ಪ ಚಕ್ಕಿ
110	ಎಂ. ನಾರಾಯಣ ಪ.ಪಂ	148	ಡಿ.ಎಂ. ಜಕ್ಕಪ್ಪಗೋಳ ಪ.ಜಾ.*
111	ಕೆ.ಹೆಚ್. ಪಾಪಣ್ಣ ರೆಡ್ಡಿ	149	ಲಕ್ಷ್ಮಣ ಬಿ. ಶೃಂಗೇರಿ ಪ.ಜಾ.*
112	ಎಂ.ಎನ್. ನಾಗರಾಜ್	150	ಹೆಚ್. ಕೃಷ್ಣಾನಾಯಕ್ ಪ.ಜಾ. *
113	ಟಿ. ಕೊಟ್ರಪ್ಪ	151	ಪಿ.ಬಿ. ಕಟ್ಟಿ ಪ.ಜಾ.**
114	ಟಿ. ಕೃಷ್ಣಮೂರ್ತಿ	152	ಮಹಾಬಲೇಶ್ವರ ವಡ್ಡಟ್ಟಿ

153	ಕರಿಸಿದ್ದಪ್ಪ ತಮ್ಮಿನಾಳ	172	ಜಿ.ವಿ. ಕೃಷ್ಣಮೂರ್ತಿ
154	ಎಂ. ಶಿವಲಿಂಗಯ್ಯ	173	ಸಿ. ಮೈಕೇಲಪ್ಪ
155	ಶಂಕರ	174	ಎನ್.ಎಸ್. ಧನಂಜಯಮೂರ್ತಿ
156	ಕೆ.ಆರ್. ರಾಮಚಂದ್ರ	175	ಟಿ. ವೀರಪ್ಪ
157	ಎಂ.ಎಸ್. ಮೂರ್ತಿ	176	ಮಲ್ಲೇಶ್
158	ಹೆಚ್.ಇ. ಈರಪ್ಪ	177	ಎನ್.ಹೆಚ್. ಚಂದ್ರಣ್ಣ
159	ಪಿ. ರಾಜಶೇಖರ	178	ಸಿದ್ದೇಗೌಡ
160	ಹೆಚ್.ಎಸ್. ಜಯಶಂಕರ ಆರಾಧ್ಯ	179	ಎನ್.ಕೆ. ಶಂಭೂಗೌಡ
161	ಕೆ.ಎಸ್. ನಂಜೇಗೌಡ	180	ಎಸ್.ಪಿ. ಚನ್ನಬಸವಣ್ಣ
162	ವಿಜಯರಾಘವನ್	181	ಹೆಚ್.ವಿ. ಪ್ರಭಾಕರ್
163	ಶಿವಬಸಪ್ಪ	182	ಎಸ್. ಶ್ರೀನಿವಾಸಮೂರ್ತಿ
164	ಎಸ್. ಮಹಾದೇವಪ್ಪ	183	ಬಿ. ಸುನಂದ
165	ಟಿ. ವೆಂಕೊಬಪ್ಪ ಪ.ಪಂ ,	184	ಬೋರಣ್ಣಗೌಡ
166	ಎಸ್.ಕೆ. ನಾಗರಾಜು	185	ಸಿ. ಬಸವಣ್ಣ
167	ಎಂ.ಎಸ್. ಸುಧಾಮಣಿ	186	ಎಸ್.ಎಂ. ರಾಜೇಗೌಡ
168	ಎನ್.ಹೆಚ್. ಪುಟ್ಟರಾಜು	187	ಬಿ. ನಾಗರಾಜು
169	ನಾಗಲಕ್ಷ್ಮಿ	188	ಹೆಚ್.ಎಸ್. ಶರ್ಮ
170	ಎಂ. ತಮ್ಮಯ್ಯ	189	ಹೆಚ್.ಎ. ಮಲ್ಲೇಶಪ್ಪ
171	ಬಿ.ಆರ್. ಸಿದ್ದಪ್ಪ	190	ಎಂ.ಜಿ. ತಿಮ್ಮೇಗೌಡ

(ಡಾः ಶಾಲಿನಿ ರಜನೀಶ್)
ಸರ್ಕಾರದ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಅಧ್ಯಕ್ಷರು

(ಬಿ.ವಿ. ಕುಮಾರಸ್ವಾಮಿ)
ಸರ್ಕಾರದ ಉಪ ಕಾರ್ಯದರ್ಶಿ (ಆ-1)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಸದಸ್ಯರು

(ಪಿ. ಕುಮಾರ್)
ನಿರ್ದೇಶಕರು (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಸದಸ್ಯರು

(ಎಸ್.ಯು. ಶಿವಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇ-ಬಿ ಮತ್ತು ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಸದಸ್ಯ ಕಾರ್ಯದರ್ಶಿ

566

ದಿನಾಂಕ 14.12.2011ರಂದು ಸರ್ಕಾರದ ಕಾರ್ಯದರ್ಶಿ (ಪಂಚಾಯತ್ ರಾಜ್)ರವರ ಅಧ್ಯಕ್ಷತೆಯಲ್ಲಿ ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಗಳು

ದಿನಾಂಕ: 14.12.2011ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿಯು ಶ್ರೀ ಎಸ್.ನಂಜುಂಡಸ್ವಾಮಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಇವರ ಪ್ರಕರಣವನ್ನು ಸಹಾಯಕ ನಿರ್ದೇಶಕರು(ಗ್ರಾಮೀಣ ಉದ್ಯೋಗ) ವೃಂದಕ್ಕೆ ಮುಂಬಡ್ತಿ ನೀಡುವ ಸಂಬಂಧ ಅರ್ಹತೆಯನ್ನು ಪರಿಗಣಿಸುವ ಸಲುವಾಗಿ ಕೈಗೆತ್ತಿಕೊಂಡಿತು. ಇವರ ಕಳೆದ 5 ವರ್ಷಗಳ ಕಾರ್ಯನಿರ್ವಹಣಾ ವರದಿಗಳಲ್ಲಿ ಉತ್ತಮ ಶ್ರೇಣಿ ನೀಡಿರುವುದನ್ನು ಸಮಿತಿಯು ಗಣನೆಗೆ ತೆಗೆದುಕೊಂಡ ಹಿನ್ನಲೆಯಲ್ಲಿ ಶ್ರೀ ಎಸ್.ನಂಜುಂಡಸ್ವಾಮಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಈ ನೌಕರರನ್ನು ಸಹಾಯಕ ನಿರ್ದೇಶಕರು(ಗ್ರಾಮೀಣ ಉದ್ಯೋಗ) ಹುದ್ದೆಗೆ ಮುಂಬಡ್ತಿ ನೀಡಲು ಅರ್ಹರಿರುವರೆಂದು ಸಮಿತಿಯು ನಿರ್ಣಯಿಸಿತು.

ಶ್ರೀ ಎಸ್.ನಂಜುಂಡಸ್ವಾಮಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಇವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರುವುದರಿಂದ ಇಲಾಖಾ ಮುಂಬಡ್ತಿ ಸಮಿತಿಯ ನಿರ್ಣಯವನ್ನು ಮುಚ್ಚಿದ ಲಕೋಟೆಯಲ್ಲಿ ಇಡಲು ಸಮಿತಿ ಸೂಚನೆ ನೀಡಿತು.

(ಡಾ: ಶಾಲಿನಿ ರಜನೀಶ್)
ಸರ್ಕಾರದ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಅಧ್ಯಕ್ಷರು

(ಬಿ.ವಿ. ಕುಮಾರಸ್ವಾಮಿ)
ಸರ್ಕಾರದ ಉಪ ಕಾರ್ಯದರ್ಶಿ (ಆ-I)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಸದಸ್ಯರು

(ಪಿ. ಕುಮಾರ್)
ನಿರ್ದೇಶಕರು (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಸದಸ್ಯರು

(ಎಸ್.ಯು. ಶಿವಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇ-ಬಿ ಮತ್ತು ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಸದಸ್ಯ ಕಾರ್ಯದರ್ಶಿ

563

ದಿನಾಂಕ 14.12.2011ರಂದು ಸರ್ಕಾರದ ಕಾರ್ಯದರ್ಶಿ (ಪಂಚಾಯತ್ ರಾಜ್)ರವರ ಅಧ್ಯಕ್ಷತೆಯಲ್ಲಿ ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಗಳು

ದಿನಾಂಕ: 14.12.2011ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿಯು ಶ್ರೀಮತಿ ಶಾರದಮ್ಮ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಇವರ ಪ್ರಕರಣವನ್ನು ಸಹಾಯಕ ನಿರ್ದೇಶಕರು(ಗ್ರಾಮೀಣ ಉದ್ಯೋಗ) ವೃಂದಕ್ಕೆ ಮುಂಬಡ್ತಿ ನೀಡುವ ಸಂಬಂಧ ಅರ್ಹತೆಯನ್ನು ಪರಿಗಣಿಸುವ ಸಲುವಾಗಿ ಕೈಗೆತ್ತಿಕೊಂಡಿತು. ಇವರ ಕಳೆದ 5 ವರ್ಷಗಳ ಕಾರ್ಯನಿರ್ವಹಣಾ ವರದಿಗಳಲ್ಲಿ ಉತ್ತಮ ಶ್ರೇಣಿ ನೀಡಿರುವುದನ್ನು ಸಮಿತಿಯು ಗಣನೆಗೆ ತೆಗೆದುಕೊಂಡ ಹಿನ್ನಲೆಯಲ್ಲಿ ಶ್ರೀಮತಿ ಶಾರದಮ್ಮ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಈ ನೌಕರರನ್ನು ಸಹಾಯಕ ನಿರ್ದೇಶಕರು(ಗ್ರಾಮೀಣ ಉದ್ಯೋಗ) ಹುದ್ದೆಗೆ ಮುಂಬಡ್ತಿ ನೀಡಲು ಅರ್ಹರಿರುವರೆಂದು ಸಮಿತಿಯು ನಿರ್ಣಯಿಸಿತು.

ಶ್ರೀಮತಿ ಶಾರದಮ್ಮ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಇವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರುವುದರಿಂದ ಇಲಾಖಾ ಮುಂಬಡ್ತಿ ಸಮಿತಿಯ ನಿರ್ಣಯವನ್ನು ಮುಚ್ಚಿದ ಲಕೋಟೆಯಲ್ಲಿ ಇಡಲು ಸಮಿತಿ ಸೂಚನೆ ನೀಡಿತು.

(ಡಾ: ಶಾಲಿನಿ ರಜನೀಶ್)
ಸರ್ಕಾರದ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಅಧ್ಯಕ್ಷರು

(ಬಿ.ವಿ. ಕುಮಾರಸ್ವಾಮಿ)
ಸರ್ಕಾರದ ಉಪ ಕಾರ್ಯದರ್ಶಿ (ಆ-1)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಸದಸ್ಯರು

(ಓ. ಕುಮಾರ್)
ನಿರ್ದೇಶಕರು (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಸದಸ್ಯರು

(ಎಸ್.ಯು. ಶಿವಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇ-ಬಿ ಮತ್ತು ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಸದಸ್ಯ ಕಾರ್ಯದರ್ಶಿ

ದಿನಾಂಕ 14.12.2011ರಂದು ಸರ್ಕಾರದ ಕಾರ್ಯದರ್ಶಿ (ಪಂಚಾಯತ್ ರಾಜ್)ರವರ ಅಧ್ಯಕ್ಷತೆಯಲ್ಲಿ ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಗಳು

ದಿನಾಂಕ: 14.12.2011ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿಯು ಶ್ರೀ ಎ.ವಿರೂಪಾಕ್ಷಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಇವರ ಪ್ರಕರಣವನ್ನು, ಸಹಾಯಕ ನಿರ್ದೇಶಕರು(ಗ್ರಾಮೀಣ ಉದ್ಯೋಗ) ವೃಂದಕ್ಕೆ ಮುಂಬಡ್ತಿ ನೀಡುವ ಸಂಬಂಧ ಅರ್ಹತೆಯನ್ನು ಪರಿಗಣಿಸುವ ಸಲುವಾಗಿ ಕೈಗೆತ್ತಿಕೊಂಡಿತು. ಇವರ ಕಳೆದ 5 ವರ್ಷಗಳ ಕಾರ್ಯನಿರ್ವಹಣಾ ವರದಿಗಳಲ್ಲಿ ಉತ್ತಮ ಶ್ರೇಣಿ ನೀಡಿರುವುದನ್ನು ಸಮಿತಿಯು ಗಣನೆಗೆ ತೆಗೆದುಕೊಂಡ ಹಿನ್ನಲೆಯಲ್ಲಿ ಶ್ರೀ ಎ.ವಿರೂಪಾಕ್ಷಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಈ ನೌಕರರನ್ನು ಸಹಾಯಕ ನಿರ್ದೇಶಕರು(ಗ್ರಾಮೀಣ ಉದ್ಯೋಗ) ಹುದ್ದೆಗೆ ಮುಂಬಡ್ತಿ ನೀಡಲು ಅರ್ಹರಿರುವರೆಂದು ಸಮಿತಿಯು ನಿರ್ಣಯಿಸಿತು.

ಶ್ರೀ ಎ.ವಿರೂಪಾಕ್ಷಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಇವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರುವುದರಿಂದ ಇಲಾಖಾ ಮುಂಬಡ್ತಿ ಸಮಿತಿಯ ನಿರ್ಣಯವನ್ನು ಮುಚ್ಚಿದ ಲಕೋಟೆಯಲ್ಲಿ ಇಡಲು ಸಮಿತಿ ಸೂಚನೆ ನೀಡಿತು.

(ಡಾ: ಶಾಲಿನಿ ರಜನೀಶ್)
ಸರ್ಕಾರದ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಅಧ್ಯಕ್ಷರು

(ಬಿ.ವಿ. ಕುಮಾರಸ್ವಾಮಿ)
ಸರ್ಕಾರದ ಉಪ ಕಾರ್ಯದರ್ಶಿ (ಆ-1)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಸದಸ್ಯರು

(ಪಿ. ಕುಮಾರ್)
ನಿರ್ದೇಶಕರು (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಸದಸ್ಯರು

(ಎಸ್.ಯು. ಶಿವಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇ-ಬಿ ಮತ್ತು ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಸದಸ್ಯ ಕಾರ್ಯದರ್ಶಿ

ದಿನಾಂಕ 14.12.2011ರಂದು ಸರ್ಕಾರದ ಕಾರ್ಯದರ್ಶಿ (ಪಂಚಾಯತ್ ರಾಜ್)ರವರ ಅಧ್ಯಕ್ಷತೆಯಲ್ಲಿ ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಗಳು

ದಿನಾಂಕ: 14.12.2011ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿಯು ಶ್ರೀ ಪುಟ್ಟಸ್ವಾಮಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಇವರ ಪ್ರಕರಣವನ್ನು, ಸಹಾಯಕ ನಿರ್ದೇಶಕರು(ಗ್ರಾಮೀಣ ಉದ್ಯೋಗ) ವೃಂದಕ್ಕೆ ಮುಂಬಡ್ತಿ ನೀಡುವ ಸಂಬಂಧ ಅರ್ಹತೆಯನ್ನು ಪರಿಗಣಿಸುವ ಸಲುವಾಗಿ ಕೈಗೆತ್ತಿಕೊಂಡಿತು. ಇವರ ಕಳೆದ 5 ವರ್ಷಗಳ ಕಾರ್ಯನಿರ್ವಹಣಾ ವರದಿಗಳಲ್ಲಿ ಉತ್ತಮ ಶ್ರೇಣಿ ನೀಡಿರುವುದನ್ನು ಸಮಿತಿಯು ಗಣನೆಗೆ ತೆಗೆದುಕೊಂಡ ಹಿನ್ನಲೆಯಲ್ಲಿ ಶ್ರೀ ಪುಟ್ಟಸ್ವಾಮಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಈ ನೌಕರರನ್ನು ಸಹಾಯಕ ನಿರ್ದೇಶಕರು(ಗ್ರಾಮೀಣ ಉದ್ಯೋಗ) ಹುದ್ದೆಗೆ ಮುಂಬಡ್ತಿ ನೀಡಲು ಅರ್ಹರಿರುವರೆಂದು ಸಮಿತಿಯು ನಿರ್ಣಯಿಸಿತು.

ಶ್ರೀ ಪುಟ್ಟಸ್ವಾಮಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಇವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರುವುದರಿಂದ ಇಲಾಖಾ ಮುಂಬಡ್ತಿ ಸಮಿತಿಯ ನಿರ್ಣಯವನ್ನು ಮುಚ್ಚಿದ ಲಕೋಟೆಯಲ್ಲಿ ಇಡಲು ಸಮಿತಿ ಸೂಚನೆ ನೀಡಿತು.

(ಡಾ: ಶಾಲಿನಿ ರಜನೀಶ್)
ಸರ್ಕಾರದ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಅಧ್ಯಕ್ಷರು

(ಬಿ.ವಿ. ಕುಮಾರಸ್ವಾಮಿ)
ಸರ್ಕಾರದ ಉಪ ಕಾರ್ಯದರ್ಶಿ (ಆ-1)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಸದಸ್ಯರು

(ಪಿ. ಕುಮಾರ್)
ನಿರ್ದೇಶಕರು (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಸದಸ್ಯರು

(ಎಸ್.ಯು. ಶಿವಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇ-ಬಿ ಮತ್ತು ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಸದಸ್ಯ ಕಾರ್ಯದರ್ಶಿ

559

ದಿನಾಂಕ 14.12.2011ರಂದು ಸರ್ಕಾರದ ಕಾರ್ಯದರ್ಶಿ (ಪಂಚಾಯತ್ ರಾಜ್)ರವರ ಅಧ್ಯಕ್ಷತೆಯಲ್ಲಿ ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಗಳು

ದಿನಾಂಕ: 14.12.2011ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿಯು ಶ್ರೀ ಜಿ.ಎಸ್.ಹಡಪದ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಇವರ ಪ್ರಕರಣವನ್ನು ಸಹಾಯಕ ನಿರ್ದೇಶಕರು(ಗ್ರಾಮೀಣ ಉದ್ಯೋಗ) ವೃಂದಕ್ಕೆ ಮುಂಬಡ್ತಿ ನೀಡುವ ಸಂಬಂಧ ಅರ್ಹತೆಯನ್ನು ಪರಿಗಣಿಸುವ ಸಲುವಾಗಿ ಕೈಗೆತ್ತಿಕೊಂಡಿತು. ಇವರ ಕಳೆದ 5 ವರ್ಷಗಳ ಕಾರ್ಯನಿರ್ವಹಣಾ ವರದಿಗಳಲ್ಲಿ ಉತ್ತಮ ಶ್ರೇಣಿ ನೀಡಿರುವುದನ್ನು ಸಮಿತಿಯು ಗಣನೆಗೆ ತೆಗೆದುಕೊಂಡ ಹಿನ್ನಲೆಯಲ್ಲಿ ಶ್ರೀ ಜಿ.ಎಸ್.ಹಡಪದ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಈ ನೌಕರರನ್ನು ಸಹಾಯಕ ನಿರ್ದೇಶಕರು(ಗ್ರಾಮೀಣ ಉದ್ಯೋಗ) ಹುದ್ದೆಗೆ ಮುಂಬಡ್ತಿ ನೀಡಲು ಅರ್ಹರಿರುವರೆಂದು ಸಮಿತಿಯು ನಿರ್ಣಯಿಸಿತು.

ಶ್ರೀ ಜಿ.ಎಸ್.ಹಡಪದ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಇವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರುವುದರಿಂದ ಇಲಾಖಾ ಮುಂಬಡ್ತಿ ಸಮಿತಿಯ ನಿರ್ಣಯವನ್ನು ಮುಚ್ಚಿದ ಲಕೋಟೆಯಲ್ಲಿ ಇಡಲು ಸಮಿತಿ ಸೂಚನೆ ನೀಡಿತು.

(ಡಾ: ಶಾಲಿನಿ ರಜನೀಶ್)
ಸರ್ಕಾರದ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಅಧ್ಯಕ್ಷರು

(ಬಿ.ವಿ. ಕುಮಾರಸ್ವಾಮಿ)
ಸರ್ಕಾರದ ಉಪ ಕಾರ್ಯದರ್ಶಿ (ಆ-1)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಸದಸ್ಯರು

(ಪಿ. ಕುಮಾರ್)
ನಿರ್ದೇಶಕರು (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಸದಸ್ಯರು

(ಎಸ್.ಯು. ಶಿವಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇ-ಬಿ ಮತ್ತು ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಸದಸ್ಯ ಕಾರ್ಯದರ್ಶಿ

ದಿನಾಂಕ 19.04.2012 ರಂದು ಸರ್ಕಾರದ ಕಾರ್ಯದರ್ಶಿ (ಪಂ.ರಾಜ್) ರವರ ಅಧ್ಯಕ್ಷತೆಯಲ್ಲಿ ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಗಳು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಆಡಳಿತ ಶಾಖೆ)ಗೆ ಸೇರಿದ ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ಹುದ್ದೆಗೆ ಮುಂಬಡ್ತಿ ನೀಡಲು ದಿನಾಂಕ 14.12.2011 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿಯ ಸಭೆಯಲ್ಲಿ, ಮಾಹಿತಿ ಲಭ್ಯವಿಲ್ಲದ ಈ ಕೆಳಕಾಣಿಸಿದ 22 ಮತ್ತು ಇಲಾಖಾ ವಿಚಾರಣೆ ಬಾಕಿ ಕಾರಣದಿಂದ ಮುಚ್ಚಿದ ಲಕೋಟೆಯಲ್ಲಿರಿಸಲಾಗಿದ್ದ 8 ಪ್ರಕರಣಗಳನ್ನು ಪರಿಶೀಲನೆಗೆ ಮಂಡಿಸಲಾಗಿತ್ತು..

<u>ಮುಂದೂಡಲ್ಪಟ್ಟ ಪ್ರಕರಣಗಳು</u>

ಕ್ರಮ ಸಂಖ್ಯೆ	ನೌಕರರ ಹೆಸರು ಮತ್ತು ಕಾರ್ಯನಿರ್ವಹಣಾ ಪಟ್ಟಿಯ ಕ್ರಮ ಸಂಖ್ಯೆ ಶ್ರೀಯುತರು	ಕ್ರಮ ಸಂಖ್ಯೆ	ನೌಕರರ ಹೆಸರು ಮತ್ತು ಕಾರ್ಯನಿರ್ವಹಣಾ ಪಟ್ಟಿಯ ಕ್ರಮ ಸಂಖ್ಯೆ ಶ್ರೀಯುತರು
1	ಸಿ.ಆರ್. ಕಮಿಟಿ ರಾಮಯ್ಯ (6)	12	ಕೆ. ಖಾವಖಾನ (119)
2	ಸಿ.ಎಸ್. ನಿಡೋಣಿ (14)	13	ಎಂ.ಎಲ್. ಕಿಣಗಿ (120)
3	ಎಂ.ಕೆ. ಹಿರೇಮಠ್ (15)	14	ವಿ.ಬಿ.ಹಿರೇಮಠ (125)
4	ಎಂ.ಜಿ. ಹೂಗಾರ (17)	15	ಟಿ. ತಿಪ್ಪೇರುದ್ರಪ್ಪ (136)
5	ಎನ್.ಸಿ. ಶಿವರಾಮು (29)	16	ಪಿ.ಎಸ್. ಗಂಗಾಧರಪ್ಪ (141)
6	ಕೆ.ಬಿ. ನಿಲುಗಲ್ಲ (46)	17	ಕೆ.ಪಿ. ರಂಗಪ್ಪ (150)
7	ಆರ್.ಎನ್. ಹುಲ್ಲೋಳಿ (66)	18	ಎಸ್.ಬಿ.ಚಿನ್ನಣ್ಣವರ (169)
8	ಡಿ.ಆರ್. ಕುಡುತುರಕರ (70)	19	ದಾಮಾಜಿ ಜಾದವ (175)
9	ಆರ್. ನಾಗರಾಜು (75) ಪ.ಪಂ.	20	ಆರ್. ಉದ್ದಂಡಶೆಟ್ಟಿ (185)
10	ಎಂ.ಹೆಚ್.ಓಲೇಕಾರ್ (90) ಪ.ಪಂ.	21	ಅಶ್ರಫ್ ಉನ್ನೀಸಾ (187)
11	ಎನ್.ಭೀಮಪ್ಪ (109). ಪ.ಜಾ.	22	ಸಿ. ಮಹದೇವಸ್ವಾಮಿ (209)

ಮೇಲ್ಕಂಡ ಎಲ್ಲಾ ಪ್ರಕರಣಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಕ್ರಮಸಂಖ್ಯೆ: 1, 8, 9 ಮತ್ತು 10ರಲ್ಲಿನ ನೌಕರರು ವೈಯಕ್ತಿಕ ಕಾರಣಗಳಿಗಾಗಿ ಮುಂಬಡ್ತಿಯನ್ನು ನಿರಾಕರಿಸಿರುವುದರಿಂದ ಅವರ ಮುಂಬಡ್ತಿಯನ್ನು ಮುಂದೂಡಲು ನಿರ್ಣಯಿಸಿತು.

ಕ್ರಮಸಂಖ್ಯೆ:2, 3, 4, 13, 21 ಮತ್ತು 22ರಲ್ಲಿ ನೌಕರರ 5 ವರ್ಷಗಳ ಕಾರ್ಯನಿರ್ವಹಣಾ ವರದಿಗಳು ಲಭ್ಯವಿಲ್ಲದ ಕಾರಣ ಅವರುಗಳಿಗೆ ಮುಂಬಡ್ತಿ ನೀಡುವುದನ್ನು ಮುಂದೂಡಲಾಯಿತು.

ಕ್ರಮ ಸಂಖ್ಯೆ: 11, 12, 15, 16, 18, ಮತ್ತು 19 ರಲ್ಲಿರುವ ನೌಕರರ ಕಾರ್ಯನಿರ್ವಹಣಾ ವರದಿಗಳು ಲಭ್ಯವಿರುವುದಿಲ್ಲ ಅಲ್ಲದೆ ಈ ಎಲ್ಲಾ 6 ನೌಕರರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರುತ್ತದೆ. ಅವುಗಳ ಪ್ರಸ್ತುತ ಹಂತ ಈ ಮುಂದಿನಂತಿದೆ.

ಶ್ರೀ ಎನ್.ಭೀಮಪ್ಪ:

ಈ ನೌಕರರು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ರಾಮಜೋಗಿಹಳ್ಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ 3ನೇ ಹಣಕಾಸು ಯೋಜನೆಯಲ್ಲಿ ಹಣ ದುರುಪಯೋಗಕ್ಕೆ ಸಂಬಂಧಿಸಿದಂತೆ ದೋಷಾರೋಪ ಪಟ್ಟಿಗಳನ್ನು ದಿನಾಂಕ: 21.10.2011ರಂದು ಜಾರಿ ಮಾಡಿದ್ದು ನಂತರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಚಿತ್ರದುರ್ಗ, ಇವರ ಆದೇಶ ಸಂಖ್ಯೆ:ಜಿಪಅ(3) ಸಿಸಿಎ/ಸಿಆರ್-11/2011-12 ದಿನಾಂಕ: 15.11.2011ರ ಪ್ರಕಾರ ಇಲಾಖಾ ವಿಚಾರಣೆ ಜರುಗಿಸಲು ವಿಚಾರಣಾಧಿಕಾರಿಯನ್ನು ನೇಮಿಸಲಾಗಿದೆ.

ಶ್ರೀ ಟಿ.ತಿಪ್ಪೇರುದ್ರಪ್ಪ:

ಇವರು ಗುಂಡೇರಿ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಸಂಪೂರ್ಣ ನೈರ್ಮಲ್ಯ ಯೋಜನೆಯಡಿ ಶೌಚಾಲಯಗಳನ್ನು ನಿರ್ಮಿಸದಿದ್ದರೂ ಹಣ ಪಾವತಿಸಿದ ಆರೋಪದ ಮೇಲೆ ಆರೋಪ ಪಟ್ಟಿಗಳನ್ನು ದಿನಾಂಕ: 02.12.2011ರಂದು ಜಾರಿ ಮಾಡಿದ್ದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಚಿತ್ರದುರ್ಗ, ಇವರ ಕಛೇರಿ ಆದೇಶ ಸಂಖ್ಯೆ: ಜಿಪಂ/ಅ(3) ಸಿಸಿಎ/ಸಿಆರ್-03/2011-12, ದಿನಾಂಕ: 26.12.2011ರ ಪ್ರಕಾರ ಇಲಾಖಾ ವಿಚಾರಣೆ ಜರುಗಿಸಲು ವಿಚಾರಣಾಧಿಕಾರಿಯನ್ನು ನೇಮಿಸಲಾಗಿದೆ.

ಶ್ರೀ ಕೆ.ಆಯ್.ಭಾವಖಾನ:

ಇವರು ವಿಜಾಪುರ ತಾಲ್ಲೂಕು ಭರಟಗಿ ಗ್ರಾಮ ಪಂಚಾಯಿತಿಯಲ್ಲಿ ಪ್ರಭಾರಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ವಸತಿ ಯೋಜನೆಯಡಿ ಫಲಾನುಭವಿಗಳಿಗೆ ಮನೆ ಮಂಜೂರು ಮಾಡುವಲ್ಲಿ ಹಣ ಬಿಡುಗಡೆ ಮಾಡುವಲ್ಲಿ ಎಸೆಗಿರುವ ಕರ್ತವ್ಯಲೋಪಗಳಿಗೆ ಸಂಬಂಧಿಸಿದಂತೆ ದೋಷಾರೋಪ ಪಟ್ಟಿಗಳನ್ನು ದಿನಾಂಕ:04.02.2010ರಂದು ಜಾರಿ ಮಾಡಿದ್ದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಬಿಜಾಪುರ, ಇವರ ಆದೇಶ ಸಂಖ್ಯೆ: ಜಿಪಂ(ಅ)/ಗ್ರಾಪಂ/ಸಿಬ್ಬಂದಿ/ಸಿಆರ್-210/2007-08, ದಿನಾಂಕ: 05.10.2011ರಂದು ಇಲಾಖಾ ವಿಚಾರಣೆ ಜರುಗಿಸಲು ವಿಚಾರಣಾಧಿಕಾರಿಯನ್ನು ನೇಮಿಸಲಾಗಿದೆ.

ಶ್ರೀ ಪಿ.ಎಸ್.ಗಂಗಾಧರಪ್ಪ:

ಇವರು ಹೊಸಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿ ಕೂಲಿ ಹಣ ಪಾವತಿಸಲು ಅಕ್ರಮ ಸಂಭಾವನೆಗೆ ಒತ್ತಾಯಿಸಿ ಪಡೆಯುತ್ತಿದ್ದಾಗ ದಿನಾಂಕ: 07.04.2012 ಲೋಕಾಯುಕ್ತ ಪೋಲೀಸರ ಬಲೆಗೆ ಬಿದ್ದಿರುತ್ತಾರೆ ಆದುದರಿಂದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಬಳ್ಳಾರಿ ಇವರು ಈ ನೌಕರನನ್ನು ನ್ಯಾಯಾಲಯದಲ್ಲಿ ಅಭಿಯೋಜನೆಗೊಳಸಲು ಕಛೇರಿ ಆದೇಶ ಸಂಖ್ಯೆ:ಜಿಪಂಬ/ಸಿಬ್ಬಂದಿ(4)/ಸಿಸಿಎ-02/11-12ದಿನಾಂಕ: 17.03.2012ರಂದು ಮಂಜೂರಾತಿ ನೀಡಿರುತ್ತಾರೆ.

[illegible]ಣ್ಣನವರ್:

[illegible]ವರು ಈ [illegible] ಪಂಚಾಯಿತಿ [illegible]ವಳ್ಳಿ ಇಲ್ಲಿ ಕರ್ತವ್ಯ [illegible]ತ್ತಿದ್ದ ಸಂ[illegible] ಕರ್ತವ್ಯಲೋ[illegible]ಗಳ ಕುರಿತು ಅವರಿಗೆ [illegible]: 24.02.2[illegible] ಪಟ್ಟಿಯನ್ನು [illegible] ಆರೋಪಗಳ [illegible] ವಿಚಾರ[illegible] ಅಧಿ[illegible]. ಜಿಲ್ಲಾ ಪಂಚಾಯಿತಿ. [illegible] ಇವರ [illegible] ಜಿಪ/ಗ್ರಾಪಂ[illegible]/ವಿವ/147/10–11, [illegible]7.05.201[illegible] [illegible] ಜರುಗಿಸಲು [illegible]ಧಿಕಾರಿಯ[illegible]

[illegible]ಜ ಜಾಧವ:

[illegible]ವರು ಎಂ.[illegible]ಯೋಜನೆಯ [illegible] ಕರ್ತವ್ಯಲೋಪ [illegible]ದರಿಂದ [illegible]:22.09.2[illegible] ದೋಷಾರೋಪ [illegible]ದಿಗೆ ಕಾರ[illegible] ಜಾರಿಗೊಳಿಸಿ [illegible]ದ ಇಲಾಖಾ [illegible]ಾಗಿ ಮುಖ್ಯ [illegible]ಕಾರಿ, ಜಿಲ್ಲಾ [illegible]ದರ್. ಇವರ [illegible]: 14.12.201[illegible]ಧಿಕಾರಿಗಳನ್ನು [illegible].

[illegible]ದಿನ ಇ[illegible] ಸಭೆಯಲ್ಲಿ ಇ[illegible] ಇರುವ [illegible]ಬಾಕಿ ಇರುವ [illegible]ಬಾಕ್ಕಿದ ಲ[illegible] ಕೆಳಕಂಡ [illegible]ಗಳನ್ನು [illegible] ಪರಿಶೀಲಿಸ[illegible] ವಿರುದ್ಧ ಇ[illegible] ಇನ್ನು [illegible]ಂಡಿರದೆ [illegible] ಎಲ್ಲಾ ನೌ[illegible] ಮುಚ್ಚಿದ [illegible]ಯಲ್ಲಿರಿಸಲು [illegible]

ಕ್ರ.ಸಂ.	[illegible] ಮತ್ತು ಜೇಷ್ಠತೆ ಕ್ರಮ[illegible]
	[illegible]
1	[illegible] ಬಾಳಪ್ಪಗೋಳ[illegible]
2	[illegible]
3	[illegible]
4	[illegible]ಮನಿ(156)
5	[illegible]
6	[illegible]
7	[illegible]17)
8	[illegible]

ಈ ಕೆಳಕಂಡ ನೌಕರರ 5 ವರ್ಷಗಳ ಕಾರ್ಯನಿರ್ವಹಣಾ ವರದಿಗಳು ತೃಪ್ತಿಕರವಾಗಿದ್ದು ಅವರುಗಳ ವಿರುದ್ಧ ಯಾವುದೇ ಇಲಾಖಾ ವಿಚಾರಣೆ /ಕ್ರಿಮಿನಲ್ ಮೊಕದ್ದಮೆ ಬಾಕಿ ಇಲ್ಲದ ಕಾರಣ ಅವರುಗಳಿಗೆ ಸಹಾಯಕ ನಿರ್ದೇಶಕರು(ಗ್ರಾಮೀಣ ಉದ್ಯೋಗ) ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ನೀಡಲು ಶಿಫಾರಸ್ಸು ಮಾಡಿತು.

ಕ್ರ.ಸಂ.	ಹೆಸರು ಮತ್ತು ಕಾರ್ಯನಿರ್ವಹಣಾ ಜೇಷ್ಠತಾ ಪಟ್ಟಿಯ ಕ್ರಮಸಂಖ್ಯೆ ಶ್ರೀಯುತ
1	ಎನ್.ಸಿ.ಶಿವರಾಂ(29)
2	ಕೆ.ಬಿ.ನಿಲುಗಲ್ಲ(46)
3	ಆರ್.ಎನ್.ಹುಲ್ಲೋಳ(66)
4	ವಿ.ಬಿ.ಹಿರೇಮಠ(125)
5	ಕೆ.ಪಿ.ರಂಗಪ್ಪ(150)
6	ಆರ್.ಉದ್ದಂಡಶೆಟ್ಟಿ(185)

(ಡಾ: ಶಾಲಿನಿ ರಜನೀಶ್)
ಸರ್ಕಾರದ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಅಧ್ಯಕ್ಷರು

(ಗೋಪಾಲ್)
ಸರ್ಕಾರದ ಉಪ ಕಾರ್ಯದರ್ಶಿ (ಆ-1)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ

(ಪಿ. ಕುಮಾರ್)
ನಿರ್ದೇಶಕರು (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಇಲಾಖೆ ಹಾಗೂ ಇಲಾಖಾ ಮುಂಬಡ್ತಿ
ಸಮಿತಿ ಸದಸ್ಯರು

(ಹೆಚ್.ಬಿ. ರಘುನಾಥ್)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇ--ಬಿ ಮತ್ತು ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಸದಸ್ಯ ಕಾರ್ಯದರ್ಶಿ

ದಿನಾಂಕ 14.12.2011ರಂದು ಸರ್ಕಾರದ ಕಾರ್ಯದರ್ಶಿ (ಪಂಚಾಯತ್ ರಾಜ್)ರವರ ಅಧ್ಯಕ್ಷತೆಯಲ್ಲಿ ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಗಳು

ದಿನಾಂಕ: 14.12.2011ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿಯು ಶ್ರೀ ಚಂದ್ರಹಾಸ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಇವರ ಪ್ರಕರಣವನ್ನು ಸಹಾಯಕ ನಿರ್ದೇಶಕರು(ಗ್ರಾಮೀಣ ಉದ್ಯೋಗ) ವೃಂದಕ್ಕೆ ಮುಂಬಡ್ತಿ ನೀಡುವ ಸಂಬಂಧ ಅರ್ಹತೆಯನ್ನು ಪರಿಗಣಿಸುವ ಸಲುವಾಗಿ ಕೈಗೆತ್ತಿಕೊಂಡಿತು. ಇವರ ಕಳೆದ 5 ವರ್ಷಗಳ ಕಾರ್ಯನಿರ್ವಹಣಾ ವರದಿಗಳಲ್ಲಿ ಉತ್ತಮ ಶ್ರೇಣಿ ನೀಡಿರುವುದನ್ನು ಸಮಿತಿಯು ಗಣನೆಗೆ ತೆಗೆದುಕೊಂಡ ಹಿನ್ನಲೆಯಲ್ಲಿ ಶ್ರೀ ಚಂದ್ರಹಾಸ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಈ ನೌಕರರನ್ನು ಸಹಾಯಕ ನಿರ್ದೇಶಕರು(ಗ್ರಾಮೀಣ ಉದ್ಯೋಗ) ಹುದ್ದೆಗೆ ಮುಂಬಡ್ತಿ ನೀಡಲು ಅರ್ಹರಿರುವರೆಂದು ಸಮಿತಿಯು ನಿರ್ಣಯಿಸಿತು.

ಶ್ರೀ ಚಂದ್ರಹಾಸ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಇವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರುವುದರಿಂದ ಇಲಾಖಾ ಮುಂಬಡ್ತಿ ಸಮಿತಿಯ ನಿರ್ಣಯವನ್ನು ಮುಚ್ಚಿದ ಲಕೋಟೆಯಲ್ಲಿ ಇಡಲು ಸಮಿತಿ ಸೂಚನೆ ನೀಡಿತು.

([illegible])
ಸರ್ಕಾರದ [illegible] (ಪಂ.ರಾಜ್)
ಗ್ರಾಮೀಣಾಭಿವೃದ್ಧಿ [illegible] ರಾಜ್ ಇಲಾಖೆ
ಹಾಗೂ [illegible] ಅಧ್ಯಕ್ಷರು

(ಬಿ.ವಿ. ಕುಮಾರಸ್ವಾಮಿ)
ಸರ್ಕಾರದ ಉಪ ಕಾರ್ಯದರ್ಶಿ (ಆ-I)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಸದಸ್ಯರು

(ಪಿ. ಕುಮಾರ್)
ನಿರ್ದೇಶಕರು (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಸದಸ್ಯರು

(ಎಸ್.ಯು. ಶಿವಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇ-ಬಿ ಮತ್ತು ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಇಲಾಖಾ ಮುಂಬಡ್ತಿ ಸಮಿತಿ ಸದಸ್ಯ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಆಡಳಿತ ಶಾಖೆ) ಗೆ ಸೇರಿದ ಗ್ರೂಪ್-ಬಿ ವೃಂದದ ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ಹುದ್ದೆಗೆ ಮುಂಬಡ್ತಿ ನೀಡುವ ಕುರಿತು ದಿನಾಂಕ 10.07.2013 ರಂದು ಬೆಳಗ್ಗೆ 10.30 ಘಂಟೆಗೆ ಮತ್ತು ದಿನಾಂಕ 27.7.2013 ರಂದು ಬೆಳಗ್ಗೆ 11.00 ಗಂಟೆಗೆ ಸರ್ಕಾರದ ಕಾರ್ಯದರ್ಶಿ, ಪಂ.ರಾಜ್, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ಜರುಗಿದ ಇಲಾಖಾ ಮುಂಬಡ್ತಿ ಸಮಿತಿ ಸಭೆಗಳ ನಡವಳಿಗಳು

- - -

<u>ಉಪಸ್ಥಿತರಿದ್ದವರು :</u>

1) ಶ್ರೀಮತಿ ವಿ. ರಶ್ಮಿ, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ – ಅಧ್ಯಕ್ಷರು
2) ಶ್ರೀ ಎಂ.ಎಸ್. ಸ್ವಾಮಿ, ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ – ಸದಸ್ಯರು
3) ನಿರ್ದೇಶಕರು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ – ಸದಸ್ಯರು
4) ಸರ್ಕಾರದ ಅಧೀನ ಕಾರ್ಯದರ್ಶಿ, ಸೇವೆಗಳು- ಬಿ & ಸಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ – ಸದಸ್ಯ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಆಡಳಿತ ಶಾಖೆ) ಗೆ ಸೇರಿದ ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ಹುದ್ದೆಗೆ ಮುಂಬಡ್ತಿ ನೀಡಲು ದಿನಾಂಕ 10.7.2011 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿಯ ಸಭೆಯಲ್ಲಿ ಸಮಿತಿಯು ಈ ಕೆಳಕಂಡ ಅಂಶಗಳ ಕುರಿತು ಅವಲೋಕಿಸಿತು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ 176 ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ಹುದ್ದೆಗಳು ಮಂಜೂರಾಗಿರುತ್ತವೆ. ಈ ಹುದ್ದೆಗಳನ್ನು ಮೂಲತಃ ಎಂ.ಜಿ.ಎನ್.ಆರ್.ಇ.ಜಿ.ಎ. ವಿಭಾಗದ ಆದೇಶ ಸಂಖ್ಯೆ: ಗ್ರಾಅಪ 104 ಉಖಾಯೋ 2007, ದಿನಾಂಕ 2.4.2008 ರಲ್ಲಿ ಹೆಚ್ಚುವರಿ ಕಾರ್ಯಕ್ರಮ ಅಧಿಕಾರಿಗಳು (Additional Programme Officers) ಎಂಬ ಶಿರೋನಾಮೆಯೊಂದಿಗೆ ಸೃಜಿಸಲಾಗಿರುತ್ತವೆ ಎಂಬುದನ್ನು ಸಭೆಯ ಗಮನಕ್ಕೆ ತರಲಾಯಿತು. ತದನಂತರ ಈ ಹುದ್ದೆಗಳನ್ನು ಕಾಲಕಾಲಕ್ಕೆ ಮುಂದುವರೆಸಿರುವುದಿಲ್ಲ. ಈಗ ಈ ಹುದ್ದೆಗಳನ್ನು ಮುಂದುವರೆಸುವ ಕುರಿತಂತೆ ಪರಿಶೀಲಿಸಿ ಪ್ರತ್ಯೇಕವಾಗಿ ಕ್ರಮ ವಹಿಸಲಾಗುತ್ತಿದೆ.

ಜೂನ್, 2013ರ ಅಂತ್ಯದವರೆಗೆ ಸಹಾಯಕ ನಿರ್ದೇಶಕರು (ಗ್ರಾ.ಉ.) ವೃಂದದಲ್ಲಿ ಒಟ್ಟು 48 ಹುದ್ದೆಗಳು ತೆರವಾಗಿವೆ. ಡಿಸೆಂಬರ್, 2013 ರ ಅಂತ್ಯದವರೆಗೆ ಇನ್ನೂ 7 ಹುದ್ದೆಗಳು ತೆರವಾಗಲಿದ್ದು, ಒಟ್ಟು 55 ಹುದ್ದೆಗಳು ಮುಂಬಡ್ತಿಗೆ ಲಭ್ಯವಾಗಲಿವೆ. ಖಾಲಿ ಹುದ್ದೆಗಳ ವಿವರಗಳನ್ನು ಸಮಿತಿ ಗಮನಿಸಿತು.

ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ 1-1-2010 ರಲ್ಲಿದ್ದಂತೆ ದಿನಾಂಕ 30-4-2011 ರಂದು ಪ್ರಕಟಿಸಲಾಗಿದೆ. ಈ ಹಿಂದೆ ದಿನಾಂಕ 14.12.2011 ರಂದು ಮತ್ತು 19.4.2012 ರಂದು ಇಲಾಖಾ ಮುಂಬಡ್ತಿ ಸಮಿತಿ

ಸಭೆಗಳು ನಡೆದ ಸಂದರ್ಭದಲ್ಲಿ ಜೇಷ್ಠತಾ ಪಟ್ಟಿಯ ಕ್ರಮ ಸಂಖ್ಯೆ: 429ರ ವರೆಗೆ ಕೆಳಗೆ ವಿವರಿಸಿದಂತೆ

1.	ದಿನಾಂಕ 30.12.2011 ರಂದು	-	160 ಅಧಿಕಾರಿಗಳಿಗೆ
2.	ದಿನಾಂಕ 12.6.2012 ರಂದು	-	30 ಅಧಿಕಾರಿಗಳಿಗೆ
3.	ದಿನಾಂಕ 26.7.2012 ರಂದು	-	5 ಅಧಿಕಾರಿಗಳಿಗೆ
		ಒಟ್ಟು	195 ಅಧಿಕಾರಿಗಳು

